# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ


ಯಕ್ಷಗಾನ ಪ್ರಸಂಗ

# ಭೂಕೈಲಾಸ

# (ಗೋಕರ್ಣ ಕ್ಷೇತ್ರಮಹಾತ್ಮೆ)


ಕವಿ

## ಮುದ್ರಾಡಿ ವೆಂಕಪ್ಪಯ್ಯ



ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ನವೆಂಬರ್ ೧೫, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com



## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

# ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯಅದರ .ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು . .ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ .ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ ವರ್ಷವರ್ಷವೂ ನೂರಾರುಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ .ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ . ಮುದ್ರಿತವಾದ ಕೃತಿಗಳ ಮಾರಾಟ .ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ .ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ .ಮತ್ತಷ್ಟು ತೊಡಕಿನದು; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳುಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ . ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ .ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ ಅಧ್ಯಯನದಆವಶ್ಯಕತೆಯಿದೆಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು .ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ . .ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ .ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆಅದೇ ಯಕ್ಷಗಾನ ಪ್ರಸಂಗಗಳ . ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ .ಡಿಜಿಟಲೀಕರಣ ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ .ಇದು ಮಾಡುವವರಿಗೆ ಅತ್ಯಂತ ಅನುಕೂಲಅಧ್ಯಯನಕ್ಕೂ ., ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ .

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದುಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು . ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕ಼ೊಡುತ್ತಿದೆಇದಕ್ಕೆ ಅಕಾಡೆಮಿಯ ಸರ್ವಸದಸ್ಯರ . ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ .ಸಹಮತವಿದೆ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

# ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

# ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ರಾಮಾಯಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ತಿಳಿದಿಲ್ಲ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೨೮೪

**ಪಾತ್ರಗಳು :**

ದೇವೇಂದ್ರ, ದೇವತೆಗಳು, ರಾವಣ, ಪ್ರಹಸ್ಥ, ಕುಂಭಕರ್ಣ, ವಿಭೀಷಣ, ಕೈಕಸೆ, ನಾರದ, ಪಾರ್ವತಿ, ಈಶ್ವರ, ಮಂಡೋದರಿ, ಸಖಿಯರು, ಮಯ, ಬ್ರಹ್ಮ, ವಿಷ್ಣು, ವಟು (ಗಣಪತಿ)

**ಕಥಾ ಸಾರಾಂಶ:**

ತಾಯಿ ಕೈಕಸೆಯ ಆತ್ಮಲಿಂಗವನ್ನು ಪೂಜಿಸಬೇಕೆಂಬ ಮಹದಾಸೆಯನ್ನು ಪೂರೈಸಲು ಮಹಾನ್ ಶಿವಭಕ್ತನಾದ ರಾವಣನು ತಪಗೈಯುತ್ತಾನೆ. ವಿಷ್ಣು ಮಾಯೆಯ ಪ್ರಭಾವದಿಂದ ಅತಿ ಸೌಂದರ್ಯವತಿಯಾದ ಮಂಡೋದರಿಯನ್ನು ಪಾರ್ವತಿಯೆಂದು ಭಾವಿಸಿ ಅವಳ ತಂದೆಯಾದ ಮಯನೊಡನೆ ಹೋರಾಡಿ ಅವಳನ್ನು ವರಿಸಿ ಕೈಕಸೆಯಲ್ಲಿಗೆ ಕರೆತರುತ್ತಾನೆ. ಹಿಂತಿರುಗಿ ಬಂದ ಮಗನನ್ನು ಕೈಕಸೆ ಆತ್ಮಲಿಂಗದ ಬಗ್ಗೆ ಕೇಳಿದಾಗ ಮತ್ತೆ ತಪಸ್ಸಿಗೆ ಹೊರಡುತ್ತಾನೆ. ಈ ಬಾರಿ ತಪಸ್ಸನ್ನು ಮೆಚ್ಚಿದ ಈಶ್ವರನ ಆತ್ಮಲಿಂಗವನ್ನು ಪಡೆದ ರಾವಣನಿಂದ ಮುಂದಾಗುವ ಅನಾಹುತವನ್ನು ತಡೆಯಲು ನಾರದರು ಗಣಪತಿಯ ಸಹಾಯ ಪಡೆಯುತ್ತಾರೆ. ಸಂಜೆಯ ಸಂಧ್ಯಾವಂದನೆಯ ಸಮಯವಾದ ಕಾರಣ ರಾವಣನು ಆತ್ಮಲಿಂಗವನ್ನು ವಟುವಿನ ವೇಷದಿಂದ ಬಂದ ಗಣಪತಿಯ ಕೈಯಲ್ಲಿಟ್ಟು ತಾನು ಸಂಧ್ಯಾಹ್ನಿಕವನ್ನು ಮುಗಿಸಿ ಬರುವವರೆಗೂ ಹಿಡಿದುಕೊಳ್ಳುವಂತೆ ಕೇಳಿಕೊಳ್ಳುತ್ತಾನೆ. ಗಣಪತಿಯು ಸ್ವಲ್ಪ ಸಮಯದವರೆಗೂ ಹಿಡಿದುಕೊಳ್ಳುತ್ತೇನೆಂದೂ, ತಾನು ಮೂರು ಬಾರಿ ಕರೆಯುವದರೊಳಗಾಗಿ ಬರಬೇಕೆಂದು ಹೇಳುತ್ತಾನೆ. ಅದರಂತೆ ಉಪಾಯದಿಂದ ಮೂರು ಬಾರಿ ಕರೆದರೂ ರಾವಣ ಬರದಿದ್ದಾಗ ಆತ್ಮಲಿಂಗವನ್ನು ಭೂಸ್ಪರ್ಶ ಮಾಡುತ್ತಾನೆ. ಭೂಸ್ಪರ್ಶವಾದ ಆತ್ಮಲಿಂಗವು ಶಿಲಾರೂಪದಿಂದ ಪ್ರತಿಷ್ಠಾಪಿಸಲ್ಪಟ್ಟು ಆ ಸುಕ್ಷೇತ್ರವು "ಗೋಕರ್ಣ" ಎಂಬ ಹೆಸರಿನಿಂದ ಪ್ರಸಿದ್ಧವಾಗುತ್ತದೆ ಎಂಬ ಭಕ್ತಿ ಪ್ರಧಾನವಾದ ಗೋಕರ್ಣ ಕ್ಷೇತ್ರ ಮಹಾತ್ಮೆ ಸಾರುವ ಕಥಾ ಪ್ರಸಂಗ.

**ಕವಿ ಪರಿಚಯ: (ಆಧಾರ: ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಮತ್ತು ಅಂತರ್ಜಾಲ)**

ಪ್ರಸಂಗಕರ್ತ ಹಿರಿಯ ಕಲಾವಿದರಾದ ಶ್ರೀ ಮುದ್ರಾಡಿ ವೆಂಕಪ್ಪಯ್ಯನವರು ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನ ಮುದ್ರಾಡಿಯಲ್ಲಿ ೧೯೧೪ರಲ್ಲಿ ಜನಿಸಿದರು. ತಂದೆ ರಾಮಯ್ಯ, ತಾಯಿ ನಾಗವೇಣಿ. ಮೂಲತಃ ಕೃಷಿಕರು. ಯಕ್ಷಗಾನ ಕಲಾ ಪ್ರಪಂಚಕ್ಕೆ ಮಹತ್ತರ ಕೊಡುಗೆ ನೀಡಿದ ವೆಂಕಪ್ಪಯ್ಯನವರು ೧೯೯೦ರಲ್ಲಿ ನಿಧನರಾದರು.

ಇವರು ಬರೆದ ಪ್ರಸಂಗಗಳು: ಅಂಜನಾ ಪರಿಣಯ, ಭೂಕೈಲಾಸ ಅಥವಾ ಮಂಡೋದರೀ ಪರಿಣಯ, ಶ್ರೀರಾಘವೇಂದ್ರ ವಿಜಯ

**ಟಿಪ್ಪಣಿ:**

# ಪ್ರಸಂಗ ಸಾಹಿತ್ಯ

**ನಾಟಿ - ಝಂಪೆ**
ಗಿರಿತನುಜೆತರಳ ದಯ | ವಿರಿಸುತೆಮ್ಮನು ಕಾಯೊ |
ಸುರಪಾದಿನುತ ದಿವ್ಯ | ಚರಣ ಶುಭವೀಯೊ ||
ತರಣಿಜಾದಿಗಳಿಂದ | ನಿರತ ಪೂಜೆಯಗೊಂಡು |
ಮೆರೆದಿರುವ ವಿಘ್ನೇಶ | ಕರುಣಾ ವಿಶೇಷಾ || ೧ ||

ಜಯತು ನೆನೆದವರಿಷ್ಟ | ವದಗಿಸುವ ಶಿವ ನಮೋ |
ಹರಕುವರ ತವ ದಿವ್ಯ | ಪದಕೆ ವಂದಿಪೆವು ||
ಪದುಳದಿಂದೀ ಕೃತಿಯ | ಸುದಯದಿಂದಲಿ ಮೆರೆಸು |
ಮುದರಾಡಿಯ ಗಣೇಶ | ಮದಮುಖವಿನಾಶ || ೨ || || 2 ||

**ಭಾಮಿನಿ**
ಮೆರೆವ ತ್ರೈಮೂರ್ತಿಗಳ ಮನದಲಿ |
ಸ್ಮರಿಸಿ ಶಾರದೆ ರಮೆ ಮೂಕಾಂಬಿಕೆ |
ಯರಿಗೆರಗಿ ದಿಕ್ಪಾಲಕರಿಗೊಂದಿಸುತ ನವಗ್ರಹರ ||
ಹರುಷದಿಂ ಧ್ಯಾನಿಸುತ ಮತ್ತಾ |
ಪರಮ ಋಷಿಸಂಕುಲವ ಪೂಜಿಸಿ |
ಗುರುಹಿರಿಯರಿಗೆ ಶಿರವೆರಗುತೀ ಕೃತಿಯನೆಸಗುವೆನು || ೧ || || 3 ||

**ಸೌರಾಷ್ಟ್ರ - ತ್ರಿವುಡೆ**
ಒಂದು ದಿನ ಕುಶನೊಡನೆ ಸಂತಸ |
ದಿಂದ ಮುನಿ ವಾಲ್ಮೀಕಿಯುಸುರಿದ |
ಹಿಂದೆ ದಶಕಂಧರನು ತಪದಿಂ | ಶಿವನನೊಲಿಸಿ || ೧ ||

ಪ್ರಾಣಲಿಂಗವ ಪೊಂದಿ ಲಂಕೆಗೆ |
ಸಾನುರಾಗದೊಳೊಯ್ವ ಕಾಲಕೆ |
ಭಾನುವಸ್ತಾಚಲಕೆ ಸೇರುವ | ವೇಳೆಯರಿತು || ೨ ||

ನಿತ್ಯವಿಧಿ ಮುಗಿಪನಕ ಲಿಂಗವ |
ನೆತ್ತಿಕೊಂಬವರಾರೆನುತ್ತಿರೆ |
ಹಸ್ತಿಮುಖ ವಟುವೇಷದಿಂದೈ | ತರಲು ಕಂಡು || ೩ ||

ಚಿತ್ತದೊಳು ಸಂತೋಷ ತಳೆಯುತ |
ಲಿತ್ತವನ ಹಸ್ತದೊಳು ಲಿಂಗವ |
ಪೊತ್ತಿಹುದು ಧರೆಗಿಡದೆ ಬಹೆ ನೀ | ಗೆಂದು ಪೋಗೆ || ೪ ||

ಗಣಪತಿಯು ಹರನಾತ್ಮಲಿಂಗವ |
ವನಧಿ ತೀರದೊಳಿಳುಹೆ ನೆಲಸುತ |
ಸನುಮತದಿ ಗೋಕರ್ಣವೆಂಬ | ಸುಕ್ಷೇತ್ರವಾಯ್ತು || ೫ || || 8 ||

**ಭಾಮಿನಿ**
ಧರಣಿಸುತೆಸಂಭವನೆ ಲಾಲಿಸು |
ಸುರಪನಮರಾವತಿಯೊಳೋಲಗ |
ವಿರಚಿಸಿದ ವಾತಾಗ್ನಿ ತರಣಿಕುಮಾರರೊಡಗೂಡಿ ||
ಸರಸಿಜಾಸನ ವರಬಲದೊಳಿಹ |
ದುರುಳ ರಾವಣನಿಂದೆಮಗೆ ಬಹು |
ತರದ ಪರಿಭವವಹುದು ಕೇಳುವರಾರು ಸುಮನಸರ || ೧ || || 9 ||

**ಮಧ್ಯಮಾವತಿ - ತ್ರಿವುಡೆ**
ಕೇಳಿರೈ ವಾತಾಗ್ನಿ ದಿನಮಣಿ |
ಬಾಲ ಮುಖ್ಯಾಮರರೆ ಮೊನ್ನಿನ |
ಕಾಳಗದಿ ಧನಪಾದಿ ಯಕ್ಷರ |
ಖೂಳ ರಾವಣ ದರ್ಪದಿ || ಗೆದ್ದು ಬಳಿಕ || ೧ ||

ಸಿರಿಸಹಿತ ಪುಷ್ಪಕವ ತಾನಪ |
ಹರಿಸುತೊಯ್ದಿಹನಲ್ತೆ ಮತ್ತೀ |
ಸುರಪುರವ ಸಾಧಿಸುವ ಮನಮಾ |
ಡಿರುವನೆಂಬುದನರಿತಿಹೆ || ದೂತರಿಂದ || ೨ ||

ಯಾಗ ಯಜ್ಞದೊಳೆಮಗೆ ದೊರೆಯುವ |
ಭಾಗಗಳು ನಿರ್ಭಾಗಮಾದವು |
ಹೇಗೆ ಸೈರಿಪುದೆಂಬ ವಿವರವ |
ನೀಗ ಯೋಚಿಸೆ ನಿಮ್ಮನು || ಕರೆಸಿಕೊಂಡೆ || ೩ ||

ವನಜಸಂಭವನೊಡನೆ ಕೇಳಲು |
ತನಗರಿಯದೆನೆ ಕ್ಷೀರವಾರಿಧಿ |
ಮನೆಯೊಳಿರುವಗೆ ಪೋಗಿ ವಂದಿಸೆ |
ಕನಿಕರವ ತೋರ್ದೆಂದನು || ಅಭಯ ಕರದಿ || ೪ ||

ವಸುಧೆಯೊಳು ಸಾಕೇತ ನಗರದಿ |
ವಸುಮತೀಶ್ವರನಾಗಿ ಮೆರೆಯುವ |
ದಶರಥನ ಸುತನಾಗಿ ರಾಘವ |
ಪೆಸರಿನಿಂ ನಿಮಗೊದಗುತ || ವಧಿಪೆ ಖಳನ || ೫ ||

ದೇವತೆಗಳಿರ ಕೋಡಗಾಂಶದಿ |
ನೀವು ಜನ್ಮಿಸಿ ಜಗದೊಳೆಸೆದಿರಿ |
ರಾವಣಾದಿಗಳನ್ನು ಬವರದಿ |
ನಾವು ಸದೆಯುತ ಧರ್ಮವ || ನುದ್ಧರಿಸುವ || ೬ || || 15 ||

**ಕಂದಪದ್ಯ**
ಎಂದಾವಚನವನಾಲಿಸಿ |
ಸಂದೇಹವ ನೀಗಿದೆನಾದೊಡೆ ವೈರಿಯು ತಾ ||
ಮುಂದರಿಯುತ್ತಿಹನಿದಕೇ |
ನೊಂದರಿಯದು ಯೆನಲೆಂದನು ದಿನಪ ಕುಮಾರಂ || ೧ || || 16 ||

**ಸುರುಟಿ - ಏಕ**
ಲಾಲಿಪುದಮರೇಶ | ಮನದೊಳು |
ತಾಳಿರು ಸಂತೋಷ ||
ಖೂಳರು ಯೆಮ್ಮನು | ಕೆಣಕಿದರುಳಿವರೆ |
ಕಾಳಗದೊಳು ಯೆ | ನ್ನಾಲಯಕಟ್ಟುವೆ || ೧ ||

ಬೆದರುವುದೇಕಿದಕೆ | ಮಾಧವ |
ನೊದಗಿಹ ಹರಿಬಕ್ಕೆ ||
ಪದುಮಭವನ ವರ | ಬಲವಿರಲೇನೈ |
ಮದಮುಖರಿಂಗುಳಿ | ಗಾಲವಿದಲ್ಲವು || ೨ ||

ಪರಮಪುರುಷನನ್ನು | ನಿತ್ಯದಿ |
ಸ್ಮರಿಸುವ ನಾವಿನ್ನು ||
ಪರಿಹರಿಸುವನೆಮ | ಗೈತಹ ಬವಣೆಯ |
ಕರುಣಾಕರನೆನ | ಲೆಂದನು ಮಾರುತ || ೩ || || 19 ||

**ಸೌರಾಷ್ಟ್ರ - ತ್ರಿವುಡೆ**
ಕೇಳು ದಿವಿಜಾಧಿಪನೆ ರಾವಣ |
ಖೂಳತನದಿಂ ಕದನಕೈತರೆ |
ಬೀಳ ಹೊಯ್ಯುವೆನೆಣಿಸದಾತನ | ಜಾಲವೆಲ್ಲ || ೧ ||

ಶ್ವೇತದ್ವೀಪದೊಳಿರುವ ನಾರೀ |
ವ್ರಾತವನು ಕೆಣಕುತ್ತಲವರೊಳು |
ಸೋತುಬಂದಿರುವಾತನೀತನು | ಧೂರ್ತನಲ್ಲೈ || ೨ ||

ಬಲಿಯ ಸೆರೆಯಾಳಾಗಿ ಬಿದ್ದವ |
ಛಲದಿ ವಾಲಿಯ ಗೆಲಲು ಪೋದವ |
ಬಲೆತ ಬಾಲದಿ ಸಿಕ್ಕಿ ನೊಂದವ | ನಿಲಲು ಹವದಿ || ೩ ||

ವರ ಬಲವನಡಗಿಸುವೆ ಮಮ ಸಂ |
ಚರಣೆ ನಿಲ್ಲಿಸಿ ಕೊಲುವೆ ನಿಶ್ಚಯ |
ತರಹರಿಸಬೇಡೆನಲು ವೈಶ್ರಾವ | ನರನು ಪೇಳ್ದ || ೪ || || 23 ||

**ಭಾಮಿನಿ**
ಸುಡುವೆನೈ ಹದಿನಾಲ್ಕು ಲೋಕವ |
ಕುಡಿವೆ ಸಾಗರವೇಳ ಲಂಕಾ |
ದಡಿಗ ಖಳರೊಡನಿರುವ ರಾವಣನನ್ನು ವಧೆಗೈವೆ ||
ಬಿಡು ಬಿಡೈ ತವ ಮನದ ದುಗುಡವ |
ನಡಗಿಸುವೆ ದಾನವರನೆಂದಾ |
ಕಡುಗಲಿಯು ನುಡಿಯುತಿರೆ ಸಂತಸವಾಂತನಮರೇಂದ್ರ || ೧ || || 24 ||

**ವಾರ್ಧಕ**
ಧರಣಿನಂದನೆಕುವರ ಲಾಲಿಸೈ ಮುಂಗಥೆಯ |
ಧರಣೀಶ ರಾವಣಂ ಲಂಕಾಪುರವನಾಳು |
ತಿರಲೊಂದುದಿನದೊಳುತ್ಸಾಹದಿಂದೋಲಗವ ವಿರಚಿಸಿದ ವೈಭವದೊಳು ||
ಕರೆಸುತ ಸಹೋದರರ ಸಚಿವಾಗ್ರಗಣ್ಯರಂ |
ತ್ವರಿತದಿಂದವರೊಡನೆ ಬೆಸಸಿದಂ ಸುಮನಸರ |
ಅರಸುತನವಂ ಸೆಳೆದು ಅಸುರಾಧಿಪತ್ಯವಂ ಸ್ಥಿರಗೊಳಿಪ ಮಾನಸದೊಳು || ೧ || || 25 ||

**ಕಾಂಭೋದಿ - ಅಷ್ಟ**
ಲಾಲಿಸಿ ಕೇಳೆನ್ನ ಮಾತ | ಮಂತ್ರಿ |
ಪೇಳುವೆನೀಗ ವಿಖ್ಯಾತ ||
ಜಾಲವಲ್ಲಿದು ಯೆಮ್ಮ ಪಾಳಯಸಹಿತೈದಿ |
ಭಾಳನೇತ್ರನ ನಾಕಲೋಕವ |
ಧಾಳಿಗೈವರೆ ಮನದಿ ನೆನೆದಿಹೆ || ೧ ||

ತರತರ ದಿವಿಜಸಂಪದವು | ಯೆಮ್ಮೊ |
ಳಿರೆ ಮುಂದೆ ಬಹುದತಿಸುಖವು ||
ಹರನನುಗ್ರಹದಿಂದ ಧುರದಿ ಕುಬೇರನ |
ಸೆರೆ ಹಿಡಿದು ಪುಷ್ಪಕವಿಮಾನವ |
ಭರಿತ ಸಾಹಸದಿಂದ ತಂದಿಹೆ || ೨ ||

ಎನ್ನಯ ವಿಕ್ರಮವೀಗ | ನಾಕ |
ಕಿನ್ನು ತೋರುವೆ ಸಾಗಿ ಬೇಗ ||
ನಿನ್ನಭಿಮತವ ಪೇಳೆನಲಾಪ್ರಹಸ್ಥನು |
ತನ್ನ ಮನದಾಲೋಚನೆಯ ಸಂ |
ಪನ್ನ ರಾವಣಗೆಂದ ವಿನಯದಿ || ೩ || || 28 ||

**ಕಾಂಭೋದಿ - ಝಂಪೆ**
ರಾವಣೇಶ್ವರ ನಿನ್ನ ಮಾರಾಂತು ಧುರವೆಸಗೆ |
ಪಾವಕಾಕ್ಷನು ಬೆದರುತಿರಲು ||
ದೇವೇಂದ್ರನಿನ್ನು ನಿನ್ನಯ ಮುಂದೆ ನಿಲಲಹನೆ |
ಭಾವಿಸೈ ನಿನ್ನ ಮನದೊಳಗೆ || ೧ ||

ಜಗದಾಧಿಪತಿಗಳಂ ಗಣ್ಯವಿಲ್ಲದೆ ಗೆದ್ದ |
ಜಗದೇಕವೀರ ನೀನಲ್ಲೆ ||
ವಿಗಡ ಭಟನೆಂದೆನಿಸಿ ಬರಿದೆ ಯೋಚಿಸಲೇಕೆ |
ಅಗಜೆಯರಸನ ಕರುಣವಿರಲು || ೨ ||

ಎನಲು ಸಂತಸವಾಂತು ದಶವದನ ಕುಂಭಕ |
ರ್ಣನ ಕಂಡು ನಿನ್ನ ಮನದಿರವ ||
ಅನುಮಾನಗೊಳದೆ ಬೆಸಸೆಂದೆನಲು ಪೇಳ್ದ ಬಾ |
ಯನು ತೆರೆದು ಧರಣಿ ಬಿರಿವಂತೆ || ೩ ||

ಅಣ್ಣ ಲಾಲಿಸಿ ಕೇಳು ಬಿನುಗರಾಗಿಹ ದಿವಿಜ |
ರನ್ನು ಗೆಲುವುದು ದೊಡ್ಡ ಘನವೆ ||
ಎನ್ನ ಪೆಸರನು ಕೇಳ್ದ ಮಾತ್ರದಿಂದೋಡುವರು |
ತಿಣ್ಣ ಭುಜಬಲರೆಂಬುದರಿಯೈ || ೪ ||

ಅಪ್ಪಣೆಯನಿತ್ತು ಕಳುಹಿದರೆನ್ನ ಕೈಚಳಕ |
ತಪ್ಪದರಿ ಭಟರೊಡನೆ ತೋರಿ ||
ಕ್ಷಿಪ್ರದಿಂದವರ ಸೆರೆವಿಡಿದು ನಿನ್ನಯ ಚರಣ |
ಕೊಪ್ಪಿಸುವೆನೆಂದು ಹೂಂಕರಿಸೆ || ೫ ||

ಎನುವ ಸಹಜನ ಮನ್ನಿಸುತ್ತ ರಾವಣ ವಿಭೀ |
ಷಣನ ಕಂಡೆಂದ ನಿನ್ನಿಷ್ಟ ||
ಎನಗರುಹಿಸೆಂದೆನಲು ಸರಮೇಶ ಕೈಮುಗಿದು |
ವಿನಯದಿಂದಗ್ರಭವಗೆಂದ || ೬ || || 34 ||

**ಕೇದಾರಗೌಳ - ಅಷ್ಟ**
ಅಣ್ಣ ನೀ ಲಾಲಿಸು ದಿವಿಜ ವಿರೋಧವ |
ನೆಣ್ಣುವುದೇತಕೀಗ ||
ಸನ್ನುತ ಮಹವಿಷ್ಣುವವರ ಸಹಾಯಕ |
ನೆನ್ನುವುದರಿತಿಹೆಯ || ೧ ||

ಹಿಂದೆ ಹಿರಣ್ಯಕಶಿಪು ಕನಕಾಕ್ಷರ |
ಕೊಂದಿಹ ವಂಚಕನು ||
ಮುಂದೆ ಬರಲು ಚಿತ್ರವಧೆಗೈವೆನಾತನ |
ಸಂದೇಹ ತಾಳದಿರು || ೨ ||

ಖರೆಯು ನೀನರುಹಿದ ಮಾತು ಚಿತ್ತವಿಸಣ್ಣ |
ಧರೆಯೊಳು ನಿನ್ನೊಡನೆ ||
ಮೆರೆದಾಡುತಿರುವ ಸಂಪತ್ತು ಸಾಕಾಗಿರೆ |
ಸುರರನ್ನು ಕೆಣಕಲೇಕೆ || ೩ ||

ಸಾಕುಮಾಡೈ ನಿನ್ನುಪನ್ಯಾಸವೀಗೆನ |
ಗೇಕೆ ಕಲಿಸುತಿರುವೆ ||
ಆ ಕಮಲಾಸನ ವರಬಲದಿಂದ ತ್ರೈ |
ಲೋಕವನಿದಿರಿಸುವೆ || ೪ ||

ಶಕ್ತಿಸಂಪನ್ನರಾಗಿಹೆವೆಂಬ ಗರ್ವದಿ |
ಯುಕ್ತವಲ್ಲದ ದ್ವೇಷದಿ ||
ಮುಕ್ತಿದಾಯಕನು ಸಂಪ್ರೀತಿಯಿಂ ಪಾಲಿಪ |
ಭಕ್ತರ ಕೆಣಕಬೇಡ || ೫ ||

ಏತಕೋಸುಗವಿಂತು ಬುದ್ಧಿವಾದವ ಪೇಳ್ವೆ |
ಪೇತುಗನಹೆನೆ ನಾನು ||
ನೀತಿನಿಧಾನವ ನಿನ್ನೊಳು ಕೇಳ್ವಾಗ |
ಲೀತೆರ ಪೇಳು ನೀನು || ೬ ||

ಜನನಿಯಿಂದಪ್ಪಣೆ ಹೊಂದಿ ಬರುವೆನರೆ |
ಕ್ಷಣದೊಳಗಷ್ಟರಲಿ ||
ದನುಜಸೇನೆಯ ನೆರಹೆಂದು ಮಂತ್ರಿಗೆ ಪೇಳಿ |
ಘನವೇಗ ಪೊರವಂಟನು || ೭ || || 41 ||

**ಭಾಮಿನಿ**
ನಾರಿ ಕೈಕಸೆ ನಿತ್ಯದಂದದಿ |
ಮಾರವೈರಿಯ ಲಿಂಗ ಮರಳಿಂ |
ವಾರಿಧಿಯ ತೀರದಲಿ ವಿರಚಿಸಿ ಪೂಜಿಸುತ್ತಿರಲು ||
ಸಾರಿಬಂದಾ ಶರಧಿ ತೆರೆಯದ |
ತೀರಿಸಲು ಮಗುಳೊಮ್ಮೆ ರಚಿಸಿರೆ |
ಪೂರಯಿಸಲದನರಿತು ಮೂರನೆ ಬಾರಿಯೆಸಗಿದಳು || ೧ || || 42 ||

**ಕಂದಪದ್ಯ**
ಆ ಸಮಯದೊಳೊಂದಲೆಯೆ |
ದ್ವಾದ್ವಿಶಿವಲಿಂಗವನೊಯ್ದಿರಲೀಕ್ಷಿಸಿ ಮನದೊಳ್ ||
ಬೇಸರಿಕೆಯ ಕಳೆಯುತಲಾ |
ದೋಷವನೆಣಿಸುತ ಬಹುಪರಿಯಿಂ ಬಿಸುಸುಯ್ದಳ್ || ೧ || || 43 ||

**ನೀಲಾಂಬರಿ - ರೂಪಕ**
ಸೈರಿಸಲೆಂತೀ ವ್ಯಥೆ ಸ್ಮರ |
ವೈರಿಯ ಲಿಂಗವನರ್ಚಿಸೆ |
ವಾರಿಧಿ ತೆರೆ ಹರಿಸಿದ ಪರಿ |
ಯಾರೊಡನುಸುರುವೆನು || ೧ ||

ಇದರಿಂದೆಮ್ಮಯ ವಂಶಕೆ |
ಒದಗುವುದಪಯಶ ನಿಶ್ಚಯ |
ಬುಧವಂದಿತ ಮಹದೇವನೆ |
ವಿಧಿಲಿಪಿಯಿಂತಾಯ್ತು || ೨ ||

ಕೇಳುವರಾರೀ ದುಗುಡವ |
ಫಾಲಾಕ್ಷನ ದಯ ತೊಲಗಿತೆ |
ಪೇಳುವುದಾರೊಡನೆನೆ ದಶ |
ಮೌಳಿಯು ನಡೆತಂದು || ೩ || || 46 ||

**ಮಾರವಿ - ಏಕ**
ಪಡೆದಾಕೆಯ ದುಗುಡವನೀಕ್ಷಿಸಿ ಖಳ |
ಕಡೆಕಲ್ಪದೊಳೆಸೆವ ||
ಮೃಡನಂತುಗ್ರದಿ ಕೆಂಗಿಡಿಗೆಡಹುತ |
ನುಡಿಸಿದನಾಕೆಯನು || ೧ ||

ಆರಿಂದೀಪರಿ ಬವಣೆಯನಾಂತಿಹೆ |
ಕಾರಣವೇನೆಂದು ||
ಘೋರನೆ ತಿಳುಹಿದರಾತನ ಬಾಳಿರ |
ಲೀ ರಸೆಯಲಿ ಬಿಡೆನು || ೨ ||

ಹರಿಯೊ ವಿರಿಂಚಿಯೊ ಹರನೋ ಸುರಪನೊ |
ನರರೋ ಕಿನ್ನರರೊ ||
ಗರುಡರೊ ಯಕ್ಷರೊ ದೈತ್ಯರೊ ನಾಗರೊ |
ವರೆಯೌ ತೀವ್ರದೊಳು || ೩ ||

ಚಾತುರ್ದಶ ಭುವನಂಗಳು ಯೆನ್ನಲಿ |
ಸೋತಿಹುದೌ ತಾಯೆ ||
ಏತರ ದುಗುಡವ ಪೊಂದಿದೆ ಪೇಳೆನೆ |
ಜಾತನೊಳುಸುರಿದಳು || ೪ || || 50 ||

**ಬಿಲಹರಿ - ಏಕ**
ಕಂದ ಲಾಲಿಸಿ ಕೇಳು | ಬಂದಿಹ ದುಗುಡವ ||
ಇಂದು ನಾ ಪೇಳುವೆ | ಸಂದೇಹಗೊಳದೆ || ಪ ||
ಸಾಂಬಶಿವನ ಲಿಂಗ | ಮರಳಿನಿಂದಲಿ ಗೈದು |
ನಂಬಿ ಪೂಜಿಸಿದೆನು | ಸಂಭ್ರಮದಿಂದ || ೧ ||

ಶರಧಿಯೊಳೈತಹ | ತೆರೆಗಳು ಮೂವೇಳೆ |
ಹರಿಸಿಕೊಂಡೊಯ್ವುದು | ಹರನ ಲಿಂಗವನು || ೨ ||

ಕ್ಷೇಮವಲ್ಲೆಮಗಿದು | ಯೋಚಿಸಿ ಮುಂದಕೆ |
ಕಾಮಾರಿದಯ ತಪ್ಪಿ | ಶೀ ಮಹಿಯೊಳಗೆ || ೩ || || 53 ||

**ಭಾಮಿನಿ**
ಇಂತೆನಲು ಪೇಳಿದನು ರಾವಣ |
ಕಂತುವೈರಿಯನೊಲಿಸುತಾತನ |
ಕಾಂತೆ ಪೂಜಿಸುವಾತ್ಮಲಿಂಗವ ಸಾಧಿಸುತ ನಿನಗೆ ||
ಸಂತಸದಿ ತಂದೀವೆ ತಾಯೇ |
ಚಿಂತೆಯನು ಪರಿತ್ಯಜಿಸಿ ಕಳುಹೆಂ |
ಬಂತರಂಗವನರಿತು ಸುತಗುಸುರಿದಳು ಕೈಕಸೆಯು || ೧ || || 54 ||

**ಕೇದಾರಗೌಳ - ಅಷ್ಟ**
ಮಗನೆ ನೀ ಹರನಾತ್ಮಲಿಂಗವ ತರುವುದು |
ಜಗದೊಳಸಾಧ್ಯವೈಸೆ ||
ವಿಗಡ ಸದಾಶಿವ ಸುಲಭದಿಂದೊಲಿವನೆ |
ಮಿಗುವರಿಯದಿರು ನೀನು || ೧ || || 55 ||

**ಕೇದಾರಗೌಳ - ಝಂಪೆ**
ಮಾತೆ ನಿನ್ನಯ ಜಠರದಿ | ಜನಿಸಿರುವ |
ಜಾತನಾನೈಸೆ ಜಗದಿ ||
ಖ್ಯಾತ ರಾವಣನೆಂಬರು | ನುಡಿದಿರುವ |
ಮಾತ ತಪ್ಪೆನು ತಿಳಿದಿರು || ೧ || || 56 ||

**ಕೇದಾರಗೌಳ - ಅಷ್ಟ**
ಪ್ರಾಣಲಿಂಗವನೀಯಲಾರನು ಪರಶಿವ |
ನೇನಗೈದರು ನಿಶ್ಚಯ ||
ಸೂನುವೆ ಬರಿ ನಗೆಗೀಡಾಪೆಯದರಿಂದ |
ನೀನರಿತಿಹುದಿದನು || ೧ || || 57 ||

**ಕೇದಾರಗೌಳ - ಝಂಪೆ**
ಜಗದಿ ವೀರಾಗ್ರೇಸರ | ನೆನಿಸಿರುವ |
ಮಗನಹೆನು ತೊರೆ ಬೇಸರ ||
ಸೊಗಸಿನಿಂ ಬಂದೆಡರನು | ಪರಿಹರಿಸಿ |
ಮೃಗಧರನೊಲವ ಪಡೆವೆನು || ೧ || || 58 ||

**ಕೇದಾರಗೌಳ - ಅಷ್ಟ**
ಬೇಡವೆಂದರೆ ಕೇಳದೀಪರಿ ಛಲಗೈವೆ |
ಮಾಡು ನಿನ್ನಿಷ್ಟದಂತೆ ||
ಕೇಡಹೊಂದದಿರೆಂದು ಪರಸುತ್ತಲಪ್ಪಣೆ |
ನೀಡೆ ತೋಷದೊಳೆಂದನು || ೧ || || 59 ||

**ಕೇದಾರಗೌಳ - ಝಂಪೆ**

ಪುರಹರನನೊಲಿಸಿ ನಾನು | ತಹೆನಮ್ಮ |
ಹರನಾತ್ಮಲಿಂಗವನ್ನು ||
ಮರೆತು ಮನಸಿನ ದುಗುಡವ | ಸಂತಸದೊ |
ಳಿರು ಶೀಘ್ರ ಬರುವೆನವ್ವ || ೧ || || 60 ||

**ವಾರ್ಧಕ**

ವಾಲಿಸಖನಿಂತೊರೆದು ಸಚಿವೇಂದ್ರನಂ ಕರೆಸಿ |
ಪೇಳಿದಂ ಕೈಲಾಸಕೈದಿ ತಪವನ್ನೆಸಗಿ |
ನೀಲಕಂಠನನೊಲಿಸುತಾತ್ಮಲಿಂಗವ ಪಡೆದು ನಾ ಲಂಕೆಗೈತರುವೆನು ||
ಕಾಳಗವನೀಗ ಪಿಂದುಳುಹುತೀ ನಗರವಂ |
ಪಾಲಿಸುತ್ತಿಹುದೆಂದು ಪೇಳಿ ಪೊರವಂಟಾಗ |
ಕೈಲಾಸಕೈದುತಿರಲರಿತವಗೆ ವಿಘ್ನವಂ ನಾಳಿಕೋದ್ಭವಜನೆಸಗೆ || ೧ || || 61 ||

**ಭಾಮಿನಿ**

ಚಾತುರಂಗವನಾಡಿ ಸಖಿಯರ |
ವ್ರಾತಮಧ್ಯದೊಳೆಸೆವ ಗಿರಿ ಸಂ |
ಜಾತೆಗೆರಗುತಲೆಂದ ನಾರದ ವಿನಯಪರನಾಗಿ ||
ಭೂತಳೇಶ್ವರನಾದ ಕೈಕಸೆ |
ಜಾತ ತಪದಿಂದೊಲಿಸಿ ನಿನ್ನಯ |
ನಾಥನಿಂ ಪೊಂದುವನು ಪರಶಿವನಾತ್ಮಲಿಂಗವನು || ೧ || || 62 ||

**ಸುರುಟಿ - ಏಕ**

ಕೇಳು ಜಗಜ್ಜನನಿ | ರಾವಣ |
ನಾಲೋಚನೆ ಕರುಣಿ ||
ಪೇಳುವದೇನೌ ನೀ ಪೂಜಿಸುತಿಹ |
ಫಾಲಲೋಚನನ ಲಿಂಗವ ಪಡೆಯುವ || ೧ ||

ತನ್ನಯ ಪುರಕದನು | ಒಯ್ಯುವ |
ನಿನ್ನು ಬೆಸಸಲೇನು ||
ಮನ್ನಿಪರಾರೌ ನಿಮ್ಮನು ಮುಂದಕೆ |
ಅನ್ಯಾಯವ ತಡೆಯುವುದೆಂದೈದಿದ || ೨ ||

ನಾರದನಿಂತೊರೆದು | ಪೋಗಲು |
ಪಾರ್ವತಿ ಭಯ ತಳೆದು ||
ಮಾರಮಣನ ಸನ್ನುತಿಗೈದಳು ದಯ |
ವಾರಿಧಿ ಕಾಯ್ವ ಜಯ ಜಯ ಕೇಶವ || ೩ ||

ಸಿಂಧುಶಯನ ನೀನು | ತ್ರೈಜಗ |
ವಂದ್ಯ ಕಾಮಧೇನು ||
ಚಂದದಿ ದಶಶಿರನಿಂದೆಮಗೊದಗುವ |
ಕುಂದ ನಿವಾರಿಸೆ ಬೇಡುವೆ ನಿನ್ನೊಳು || ೪ || || 66 ||

**ಭಾಮಿನಿ**
ಗಿರಿಜೆಯೀಪರಿಯಿಂದ ನುತಿಸುವ |
ದರಿತು ದಾಮೋದರನು ಕಾಣಿಸು |
ತೊರೆದ ನೀ ತರಹರಿಸಲೇತಕೆ ಮನದ ದುಗುಡವನು ||
ಮರೆವುದೌ ರಾವಣನು ಹರನೊಳು |
ವರವ ಬೆಸಗೊಂಬಾಗಲಾತಗೆ |
ಸ್ಮರಣೆ ಬದಲಾಪಂದವೆಸಗುವೆನೆನುತ ಮಾನಸದಿ || ೧ || || 67 ||

**ಕೇದಾರಗೌಳ - ಅಷ್ಟ**
ಸ್ಮರಿಸುತ್ತ ಮಾಯೆಯ ನಿಂತೆಂದ ನೀ ದಶ |
ಶಿರನನಾವರಿಸಿಕೊಂಡು ||
ಹರನೊಡನಾತನು ವರ ಬೆಸಗೊಂಬಾಗ |
ಮರೆತಾತ್ಮಲಿಂಗವನು || ೧ ||

ಬದಲೊಂದು ವರ ಕೇಳುವಂತೆ ನೀ ಗೈವುದು |
ಮದಮುಖನಾತನೊಳು ||
ವಿಧುಧರನಾತ್ಮಲಿಂಗವು ಸೇರಿಕೊಂಡರೆ |
ಪದಿನಾಲ್ಕು ಜಗ ದಹಿಪ || ೨ ||

ಎಂದು ಮಹಾವಿಷ್ಣುವರುಹಲಿಕಾತಗೆ |
ವಂದಿಸಿ ವಿಷ್ಣುಮಾಯೆ ||
ಇಂದು ನಿನ್ನಾಜ್ಞೆಯಂತೆಸಗುವೆನೆಂದೈದೆ |
ಮುಂದಾದ ಕಥೆಯ ಪೇಳ್ವೆ || ೩ || || 70 ||

**ಆರ್ಯಸವಾಯಿ - ಏಕ**
ರಾವಣನೈತಂದಾಗ ಕೈಲಾಸದಿ |
ಪಾವಕನೇತ್ರನ ಭಕ್ತಿಯೊಳು ||
ಸೇವಿಸಿ ನಾನಾವಿಧ ಸನ್ನುತಿಸಿದ |
ದೇವರದೇವ ಮಹೇಶನನು || ೧ || || 71 ||

**ಶಂಕರಾಭರಣ - ಅಷ್ಟ**
ಪಾರ್ವತೀಶ | ಶಂಭೊ ಮಹೇಶ |
ಶರ್ವ ಧೂರ್ಜಟಿ ಶಿವ | ತ್ರಿಪುರವಿನಾಶ ||
ಭ | ಜಕ ಪರಿಪೋಷ | ತ್ರಿ | ಜಗ ಪಾಲಿಪೀಶ || ೧ ||

ಸ್ಥಿರ ಮನದಿಂ ದಶ | ಶಿರಗಳ ನಿನ್ನ|
ಚರಣದೊಳಿರಿಸಿ ವಂದಿಸುವೆ ಸಂಪನ್ನ ||
ಬಾ | ರೆಯ ಸುಪ್ರಸನ್ನ | ತೋ | ರೆಯ ದಯವನ್ನ || ೨ ||

ಸತತ ನಿನ್ನನು ಧ್ಯಾನಿ | ಸುತಲಿಹೆ ದೇವ |
ಗತಿಯತೋರೊಲಿದೀಗ |ಅತಿಸುಪ್ರಭಾವ ||
ದಿಂ | ದಲಿ ಜಗ ಕಾವ | ವಂ | ದಿತ ಮಹದೇವ || ೩ || || 74 ||

**ಭಾಮಿನಿ**
ಇಂತು ರಾವಣನೇಳುವತ್ಸರ |
ಕಂತುವೈರಿಯನೊಂಟಿಕಾಲಲಿ |
ನಿಂತು ತಪವನ್ನೆಸಗೆ ಪರಶಿವನರಿತು ಸತಿಯೊಡನೆ ||
ಸಂತಸದಿ ನಡೆತಂದು ಭಕ್ತನೆ |
ಚಿಂತೆಬಿಡು ವರಕೇಳು ಯೆನೆ ಭೂ |
ಕಾಂತನನ್ಯಾವರಿಸೆ ಮಾಯೆಯು ಮನದಿ ಯೋಚಿಸಿದ || ೧ || || 75 ||

**ಧನ್ಯಾಶ್ರೀ - ಅಷ್ಟ**
ಕೇಳಲೇನು | ಕಾಮಿತವನ್ನು | ಕೇಳಲೇನು || ಪ ||
ಧನವ ಕೇಳಲೆ ದೇವನೊಡನೆ | ಲಂಕಾ |
ಜನಪಾಲನೆಂದೆನಿಸಿಹೆನೆ ||
ಕನಕಾದಿ ವಸ್ತು ವಾಹನವ ಕೇಳಲೆ ಸರ್ವ |
ವೆನಗೆ ಸ್ವಾಧೀನವಾ | ಗಿಹುದು ಜಗದಿ ತಾನೆ || ೧ ||

ವಿಕ್ರಮ ನೀಡೆನಲೇನು | ಸುರ |
ಶಕ್ರಾದ್ಯರನು ಗಣ್ಯ ತರೆನು ||
ಚಕ್ರವರ್ತಿಗಳೆನ್ನ | ಕಂಡರೋಡುವರಲ್ಲ |
ಚಕ್ರಿಬಂದಿದಿರಾಗಿ | ನಿಲ್ಲನೆನ್ನೆದುರಿಲಿ || ೨ ||

ಯಾರಿಂದ ಮೃತಿಬಾರದಂತೆ | ಕೊಂಡೆ |
ಸಾರಸಭವ ವರ ಪಿಂತೆ ||
ಶೂರನಾಗಿರುವೆನ | ಗೀಗ ಬೇಕಾದುದೀ |
ಮೂರುಲೋಚನರಾಣಿ | ಗಿರಿಬಾಲೆ ಗುಣಶೀಲೆ || ೩ || || 78 ||

**ಮಾರವಿ - ಏಕ**
ಇಂತಾಲೋಚಿಸುತಾಕ್ಷಣ ದಶಶಿರ |
ಕಂತುಹರಗೆ ನಮಿಸಿ ||
ಸಂತಸದಿಂ ಬೆಸಗೊಂಡನು ನಿನ್ನಯ |
ಕಾಂತೆಯ ಕರುಣಿಪುದು || ೧ ||

ಇಂದುಧರನು ಪೇಳಿದ ನೀನೀವರ |
ದಿಂದ ಕೆಡುವೆ ಬೇಡ ||
ಮುಂದೇನಾದರು ಬೇಡೆನೆ ದಶಮುಖ |
ನೆಂದನು ಕೈಮುಗಿದು || ೨ ||

ಮಾರಾರಿಯೆ ಭಜಕಾವಳಿ ನಿನ್ನೊಳು |
ಕೋರುವ ವರವೀವ ||
ವಾರತೆಯರಿಯುತ ನಾ ಬೆಸಗೊಂಡುದ |
ಕೀರೀತಿಯೊಳೊರೆದೆ || ೩ ||

ಮಸಣವ ಕಾವ ದಿಗಂಬರ ನೀನಹೆ |
ಪೊಸ ಯವ್ವನೆಯೊಡನೆ ||
ರಸಿಕರ ತೆರದಿಂ ರಮಿಸಲಸಾಧ್ಯವು |
ವ್ಯಸನವನುಳಿದೀಯೈ || ೪ ||

ಎನಲಾತಗೆ ಬೇರಾಡದೆ ತನ್ನಯ |
ವನಿತೆಯ ಕರೆದೆಂದ ||
ಎನಗೀತನು ಶರಣರೊಳತ್ಯಧಿಕನು |
ಮನಸೋತಿಹ ನಿನಗೆ || ೫ ||

ಆದುದರಿಂದಿವಗಿತ್ತಪೆ ನಿನ್ನನು |
ಸಾದರದಿಂದ್ಯೈದಿ ||
ಬೋಧಿಸಿ ಸುಜ್ಞಾನಾಮೃತ ಕಾರ್ಯವ |
ಸಾಧಿಸಬಹುದೆಂದು || ೬ || || 84 ||

**ಕಂದಪದ್ಯ**
ಮನ್ನಿಸಿ ದಶಕಂಧರನಂ |
ತನ್ನರಸಿಯನಾತಗೆ ಶಿವನೀಯಲಿಕವನಂ ||
ಸನ್ನುತಿಸುತ ಕರೆದೊಯ್ಯುವ |
ದನ್ನರಿಯುತ ನಾರದ ನಡೆತಂದನು ಭರದಿಂ || ೧ || || 85 ||

**ವಾರ್ಧಕ**
ಧಾರುಣಿಜೆಸಂಜಾತ ಚಿತ್ರವಿಸು ಮುಂಗಥೆಯ |
ಮಾರಾರಿಯರಸಿ ರಾವಣನೊಡನೆ ಪೋಪುದಂ |
ನಾರದನು ತಿಳಿದಿವರಿಗಿದಿರಾಗಿ ಬರೆ ಕಂಡು ವೀರ ದಶಗಳನೊಂದಿಸಿ ||
ಘೋರ ತಪದಿಂ ಶಿವನನೊಲಿಸಿ ವರವಾಗಿ ನಾ |
ಪಾರ್ವತಿಯ ಬೇಡಿದಕೆ ಅಸ್ತೆಂದು ಕರುಣಿಸಿದ |
ಆರವಗೆ ಸರಿದಾತರೆಂದವಳ ಮುನಿವರಗೆ ತೋರೆ ಭಯ ನಟಿಸುತೆಂದ || ೧ || || 86 ||

**ಬೇಗಡೆ - ತ್ರಿವುಡೆ**
ಏನಿದು ಮಹದಾಶ್ಚರ್ಯ | ದಾನವರಾಯ || ಪ ||
ಏನಿದಮಮಾ ಸುದತಿಯೆನ್ನುತ |
ಲಾನನವನೀಕ್ಷಿಸಿದರೆನ್ನಯ |
ಮಾನಸಕೆ ಪೆಣ್ರೂಪತದಂದದಿ |
ಕಾಣಿಸುತ್ತಿರುವಳು ಕುರೂಪಿಣಿ || ಅ.ಪ. ||
ಹರನೊಲಿದೀಕೆಯನು | ಕೊಟ್ಟನೆ ನಿಜ |
ವರಿಯದಾದೆನು ಪೇಳ್ವೆನು ||
ಒರೆಯದೀ | ಮಾತುಗಳನೆನ್ನೊಳು |
ಹರುಷದಿ | ಕರೆದೊಯ್ಯೆ ಲಂಕೆಗೆ |
ತ್ವರಿತದಿ | ಬರುವುದು ವಿನಾಶವು |
ಮರೆಯದೀ | ತರುಣಿಯನು ಪಿಂದಕೆ |
ಹರನಿಗೀಯುತ ಬಹುದು ಲೇಸೈ |
ಗಿರಿಜೆಯೆಂಬುವ ಭ್ರಾಂತಿಯನು ತ್ವರೆ |
ಪರಶಿವನು ಮರೆಸಿರುವನಾಕೆಯ || ೧ ||

ಏತಕೀ ವರವ ನೀನು | ಯಾಚಿಸಿದೆ ವಿ |
ಖ್ಯಾತನೆ ಪುರಹರನು ||
ನಾಥೆಯ ಕೇಳಿದಕೆ ಗಿರಿಸಂ |
ಜಾತೆಯ | ಮರೆಸಿಟ್ಟು ನಿನ್ನೊಳು |
ಪ್ರೀತಿಯ | ತೋರಿಸುತ ನೀಡಿದ |
ಭೂತೆಯ || ನೀ ಮೂಢನೆನುತೀ |
ಭೂತಳದೊಳಿಹರೆಲ್ಲರರಿವರು |
ಖ್ಯಾತವಾಗಿಹ ನಿನ್ನ ಪೆಸರಿಗೆ |
ನೀ ತಿಲಾಂಜಲಿ ಕೊಡುವುದನುಚಿತ |
ಭೀತನಾಗದೆ ಪಿಂದಕೊಪ್ಪಿಸು || ೨ || || 88 ||

**ಭಾಮಿನಿ**
ಸುರಮುನಿಪ ನಿನಗಂಧಕಾರವು |
ಮರೆಸಿಹುದು ನೇತ್ರದ ಪಟುತ್ವವ |
ಗಿರಿಜೆಯನು ಪೆಣ್ಭೂತವಾಗೆಣಿಸಿರುವೆಯದರಿಂದ ||
ಪರಿಕಿಸೈ ಮಗುಳೊಮ್ಮೆ ಮುಖವೆಂ |
ದೊರೆದ ರಾವಣಗೆಂದ ನಾರದ |
ಮರಳಿ ನೋಡೆನೆ ಭದ್ರಕಾಳಿಯ ಕಂಡು ಬೆರಗಾದ || ೧ || || 89 ||

**ಸಾರಂಗ - ಏಕ**
ಅರರೆ ಏನಾಶ್ಚರ್ಯವೀನಾರಿ | ನೋಡೆ |
ಧರಣೀಯ ನುಂಗುವ ಹೆಮ್ಮಾರಿ || ಪ ||
ಸೋತೆ ನಾನಿವಳ ವದನಕಾಗಿ | ಭೂತ |
ನಾಥನನೊಲಿಸಿ ಪಡೆಯಲಾಗಿ ||
ಸಾತಿಶಯದೊಳುಭಯರು ಸಾಗಿ | ಬರೆ |
ಭೂತದಂತದ್ಭುತ ರೂಪಾಗಿ || ೧ ||

ಭರಿತ ಭೀತತೆಗೊಳಿಸುವಳನ್ನು | ಹರ |
ನರಸಿಯೆಂದಾನು ಭ್ರಮಿಸಿದೆನು ||
ಧರೆಗೆ ಹೆಮ್ಮಾರಿಯಂತಿಹಳನ್ನು | ಮುಂದೆ |
ಕರೆದೊಯ್ಯೆ ಬವಣೆಯಗೊಂಬೆನು || ೨ || || 91 ||

**ವಾರ್ಧಕ**
ಎಂದು ನಾನಾತೆರದೊಳಾಲೋಚಿಸುವ ದೈತ್ಯ |
ಗೆಂದ ನಾರದನೀಗಲೀಕೆಯಂ ಪರಶಿವಗೆ |
ಪಿಂದಕೊಪ್ಪಿಸುತ ಬರೆ ಲೇಸೆನಲಿಕಾಗ ದಶಕಂಧರನು ದೇವಋಷಿಯ ||
ಮುಂದಿರಿಸಿಕೊಂಡು ಕೈಲಾಸಕ್ಕೈದುತ ಶಿವನಿ |
ಗಂದೀಯೆ ಕಾಳಿಯಂ ಪೇಳ್ದ ನಾರದನಾಗ |
ಇಂದುಮೌಳಿಯೆ ನಿನ್ನ ಶರಣರಂ ವಂಚಿಪುದು ಚಂದವಹುದೇ ಯೆನುತಲಿ || ೧ || || 92 ||

**ಸೌರಾಷ್ಟ್ರ - ತ್ರಿವುಡೆ**
ನಾರದನು ಸಂಕೇತವೆಸಗಲು |
ಮಾರವೈರಿಯು ತಿಳಿದು ನಗುತಿರೆ |
ಧಾರುಣೀಶ್ವರ ಕೈಕಸೆಯ ಸುಕು | ಮಾರ ಶಿವನ || ೧ ||

ಕಂಡು ಮನದೊಳಗಧಿಕ ಖಾತಿಯ |
ಗೊಂಡು ಪೇಳಿದ ನಿನ್ನ ಪೂಜಿಸೆ |
ರುಂಡಮಾಲನೆ ನಾನು ಜಗದೊಳು | ಭಂಡನಾದೆ || ೨ ||

ನೀನು ಶರಣರ ಮನದ ವಾಂಛಿತ |
ದಾನಿಯೆಂದರಿತಿದ್ದೆನಾದರೆ |
ಮಾನಬಿಟ್ಟು ಸ್ಮಶಾನ ಕಾಯುವ | ಹೀನನ್ಯೆಸೆ || ೩ ||

ನಿನ್ನ ಸೇವಿಸಲೇನು ಸತ್ಫಲ |
ವನ್ನು ನೀಡಿದೆ ಚೋರ ಪೇಳೆನ |
ಲುನ್ನತದ ಖಾತಿಯ ತಳೆದು ಮೂ | ಗಣ್ಣನೆಂದ || ೪ ||

ಬೇಡವೈ ದಾನವ ನಿರರ್ಥಕ |
ವಾದ ದುರ್ವಾಕ್ಯಗಳು ಯೆನ್ನಯ |
ಬಾಡಬಾಕ್ಷಿಗೆ ಬೆಂದುಪೋಗುವೆ | ಕೇಡು ಬಹುದು || ೫ ||

ಎನ್ನ ದಹಿಸಲು ನೀನು ಶಕ್ತನೆ |
ನನ್ನಿಯೇತಕೆ ಕಾಂಬೆನಧಿಕವು |
ನಿನ್ನ ಶಕ್ತಿಯೊ ಎನ್ನ ಭಕ್ತಿಯೊ | ಯೆನ್ನುತೆದ್ದು || ೬ ||

ನಾರದನಿಗೆರಗುತ್ತ ರಾವಣ |
ಸಾರಿ ಪೊರಮಡಲತ್ತಮಯನ ಕು |
ಮಾರಿ ಮಂಡೋದರಿಯು ಸಖಿಯರ | ವಾರ ಕೂಡಿ || ೭ || || 99 ||

**ಭಾಮಿನಿ**
ಧರಣಿಯೊಳು ಮೆರೆಯುತಿಹ ಗೋದಾ |
ವರಿ ನದಿಗೆ ನಡೆತಂದು ಸಕಲರು |
ಧರಿಸಿದಾಭರಣಾದಿ ವಸನಂಗಳನು ತೆಗೆದಿರಿಸಿ ||
ಹರುಷದಿಂದಿಳಿಯುತ್ತ ಜಲದೊಳು |
ಪರಿಪರಿಯ ಕ್ರೀಡಾವಿಲಾಸದಿ |
ಪರವಶತೆಯಿಂದಾಡಿದರು ವನಕೇಳಿ ವಿಭವದೊಳು || ೧ || || 100 ||

**ಪಂತುವರಾಳಿ - ಆದಿ**
ಶರಕೇಳಿಯಾಡಿದರು | ಮೆರೆವ ಗೋದಾ |
ವರಿ ನದಿಯೊಳು ಸ್ತ್ರೀಯರು ||
ಎರಚುತ್ತಲೋರ್ವರಿಗೋರ್ವರು ವಾರಿಯ |
ಹರುಷದಿಂದಾಡಿದರು | ಮಯಾಖ್ಯ ಕು |
ವರಿಯಾದಿ ತರುಣಿಯರು || ೧ || || 101 ||

**ದೇವಡಿ - ರೂಪಕ**
ತರುಣಿಯರೆಲ್ಲರು | ವಸನಾಭರಣ ತೊಟ್ಟು |
ತ್ವರಿತದಿಂದಲ್ಲಿಹ ಸುಮವ ||
ಹರುಷದಿ ಕೊಯ್ಯುವ | ಕಾಲದೊಳೋರ್ವಳು |
ಒರೆದಳು ಮಯಜಾತೆಯೊಡನೆ || ೧ ||

ಮಿತ್ರೆ ನೀ ಮನದೊಳ | ಗಾರನು ವಲಿದಿಹೆ |
ಸತ್ಯವ ಪೇಳ್ವುದೆನ್ನೊಡನೆ ||
ಚಿತ್ತವ ಹರಿಸಿದ | ಕಾಂತನಾರೆಂಬುದ |
ಬಿತ್ತರಿಸವ್ವ ಯೋಚಿಸದೆ || ೨ ||

ಎನಲೆಂದಳೆಲೆ ವಾರಿ | ಜಾಕ್ಷಿಯೆ ನಾ ದಶಾ |
ನನನ ವಿಕ್ರಮವನ್ನು ಕೇಳಿ ||
ಮನವಿರಿಸಿಹೆನೆಂದು | ನಾಚಿಕೊಂಡಿರಲು ರಾ |
ವಣನಲ್ಲಿಗೈತರೆ ನೋಡಿ || ೩ || || 104 ||

**ಕಂದಪದ್ಯ**
ದಶಶಿರನನ್ನೀಕ್ಷಿಸುತಂ |
ಕುಸುಮಾಂಬಕಿಯರು ಭಯದಿಂ ಮರೆಯಾಗಿರಲಾ ||
ಸುಸಮಯವಂ ಸಾಧಿಸುತಂ |
ಶಶಿಮುಖಿ ಮಂಡೋದರಿಯೊಡನೊರೆದನು ಮುದದಿಂ || ೧ || || 105 ||

**ಕಲ್ಯಾಣಿ - ಆದಿ**
ನಾರಿ | ಸುಗುಣ ಸುವಿ |
ಚಾರಿಯೆ | ಬಾ | ಬಾ | ನೀರೆ ಶುಭಾಕಾರಿ ||
ಕ್ರೂರ ಶರಗಳನು | ಮಾರನೆಸೆಯುತಿಹ |
ಭೂರಿ ವಿಕ್ರಮವ | ತೋರುತಲೀಗಳು || ಪ ||
ಲಲನೆಯೇ | ಮನ | ದೊಲವರಿಯೆನು ಬಲು |
ಛಲವ ಮಾಳ್ಪುದೇನೆ || ಸುಂದರಿ |
ಹಲವು ಮಾತನಾ | ಡಲು ದೊರೆಯುವ ಸ | ತ್ಫಲವನರಿಯೆ ಜಾಣೆ ||
ಬಲಯುತೆ | ಮನ್ಮಾನಸವನು ನೀ | ನೊಲಿಯುತೆ | ಸಂತೋಷವ ಬೀರದಿ |
ರಲು ಬಲು ದುಗುಡವ | ತಳೆಯುವೆ ನಿಶ್ಚಯ | ಜಲಜನೇತ್ರೆ ಕೋ |
ಮಲೆಯಿದನರಿತಿರು || ೧ ||

ಗಿರಿಸುತೆ | ಕೃಪೆ | ಯಿರಿಸುತಲೆನ್ನನು |
ವರಿಸೆ ಹರಿಣನೇತ್ರೆ || ಮನ್ಮಥ |
ನರಸಿಯಂದದಿಂ | ಮಿರುಗುತಿರ್ಪ ಮದ | ಕರಿಗಮನೆ ಸುವಕ್ತ್ರೆ ||
ಸುರರೊಳು | ಕಿನ್ನರ ನರ ವಿದ್ಯಾ | ಧರರೊಳು | ಜೋಡಿರ್ಪರೆ ನಿನ್ನಂ |
ತ್ಕರಿಸುವ ಸುಂದರ ತರುಣಿಯ ರೊರೆಯೇ | ಹರುಷದೊಳೊಲಿಸೆನ |
ಲೊರೆದಳು ನಗುತಲಿ || ೨ || || 107 ||

**ಸಂವಾದ**
ವೀರ ನಿನ್ನೊಳೆನ್ನ ನಾ ಕಾ | ಮಾರಿಯರಸಿಯೆಂದು ಪೇಳ್ದ |
ರಾರುಯೆಂಬುದನ್ನು ಬೆಸಸೆ | ಕೋರುವೆನ್ನೊಳೀಗ ಪೇಳು || ೧ || || 108 ||

**ಕಾಂಭೋದಿ - ಏಕ**
ಕಾಮಿನಿಮಣಿಯೆ ಮೊನ್ನೆ | ಕಾಮವೈರಿಯನ್ನು ಒಲಿಸಿ |
ಕಾಮ್ಯವಾಗಿ ಕೇಳೆ ಶಿವೆಯ | ಪ್ರೇಮದಿಂದಿತ್ತ || ೧ || || 109 ||

**ಸಂವಾದ**
ಇಂದುಧರನಿಂದವನ ಸತಿಯ | ಪೊಂದಿದಾತ ಯೆನ್ನ ಗಿರಿಜೆ |
ಯೆಂದು ಪೇಳಲೇತಕೆಂಬು | ದಿಂದು ತಿಳಿಯದಾದೆನಯ್ಯ || ೧ || || 110 ||

**ಕಾಂಭೋದಿ - ಏಕ**
ನೀರಜಾಕ್ಷಿ ಕೇಳೆ ಶಿವೆಯ | ಸೇರಿ ಲಂಕೆಗೈದುತಿರಲು |
ಘೋರ ರೂಪು ತೋರಿ ಪೋಗೆ | ಸಾರಿಬಂದಿಹೆ || ೧ || || 111 ||

**ಸಂವಾದ**
ಮಾನವಂತನೆಂದೆನಿಸಿದ | ದಾನವೇಂದ್ರ ಲಾಲಿಸಯ್ಯ |
ನಾನು ಮಯಸಂಭೂತೆ ದಿಟವು | ನೀನು ಭೂಮಿಸಲೇತಕಿಂತು || ೧ || || 112 ||

**ಕಾಂಬೋಧಿ - ಏಕ**
ನಿನ್ನ ಪೋಲುತಿದ್ದ್ವಳಾಸಂ | ಪನ್ನೆ ನೀನೇ ಯೆಂದು ತಿಳಿದೆ |
ಸನ್ನುತಾಂಗಿ ನಿನ್ನ ಪೆಸರೇ | ನೆನ್ನೊಳು ಪೇಳು || ೧ || || 113 ||

**ಸಂವಾದ**
ವಸುಧೆಪಾಲ ಕೇಳು ಯೆನ್ನ | ಪೆಸರು ಮಂಡೋದರಿಯೆನುತ್ತ |
ಉಸುರುತಿಹರು ನೀನ್ಯಾರೆಂದು | ಬೆಸಸೆ ಕೇಳಿ ತೋಷಗೊಂಬೆ || ೧ || || 114 ||

**ಕಾಂಭೋದಿ - ಏಕ**
ತರುಣಿ ಕೇಳೆ ಮೆರೆವ ಲಂಕಾ | ಪುರವನಾಳುವೆನ್ನ ಪೆಸರು |
ವರೆವರು ರಾವಣನೆಂದು | ವರಿಸು ಯೆನ್ನನು || ೧ || || 115 ||

**ಸಂವಾದ**
ಯೆನ್ನ ಪಿತನ ಕೇಳಿ ಲಗ್ನ | ವನ್ನು ಮಾಡಿಕೊಂಬುದುಚಿತ |
ನಿನ್ನ ವರಿಪ ಭಾಗ್ಯ ಬಂದು | ದೆನ್ನ ಪೂರ್ವ ಸುಕೃತದಿಂದ || ೧ || || 116 ||

**ಕಂದಪದ್ಯ**
ಇಂತಾದಶಮುಖಿಗೆರಗುತ |
ಕಾಂತಾಮಣಿ ತನ್ನಯ ಸದನಕ್ಕೈದುತ್ತಂ ||
ಕಂತುಶರದಿ ಬಳಲುತ್ತಂ |
ದಂತಿಗಮನೆ ಸಖಿಯಳ ಕೂಡಿಂತೆಂದೊರೆದಳ್ || ೧ || || 117 ||

**ಶಂಕರಾಭರಣ - ರೂಪಕ**
ಕಂಡೆನೆನ್ನ | ಕಾಮಿತಾರ್ಥ | ಕಲ್ಪದ್ರುಮವನು ||
ಪುಂಡರೀಕನೇತ್ರನು ಮಾ | ರ್ತಾಂಡಭೂಪನು || ೨ ||

ಮೋದವಾಂತೆ | ನಿಂದು ಕಾಣು | ತಾ ದಶಾಸ್ಯನ ||
ಮೇದಿನಿಯೊಳು | ಸೂರೆಯಾಯಿ | ತೆನ್ನ ತನುಮನ || ೩ ||

ಪರಿಪರಿಯಲಿ | ಸ್ಮರನ ಹತಿಯ | ಹರಿಸುತಿವನೊಳು ||
ಮೆರೆಯುವಂದ | ಕರುಣಿಸೆನ್ನ | ಹರಿಯೆ ದಯದೊಳು || ೪ || || 120 ||

**ವಾರ್ಧಕ**
ಸುದತಿಯೀಪರಿ ಸಖಿಯರೊಡನೊರೆಯುತಿರಲಿತ್ತ |
ಮದನ ಬಾಣದಿ ಬಳಲಿ ದಶಕಂಠ ರಾವಣಂ |
ಪದುಮಾಕ್ಷಿಯನ್ನೆಂತು ವರಿಪುದೆಂದಿರಲಲ್ಲಿಗೊದಗಿ ನಾರದನೈತರೆ ||
ಪದಕೆ ಸಾಷ್ಟಾಂಗ ವಂದನೆಗೈದು ಪೊಗಳಲ್ಕೆ |
ಪದುಳದಿಂ ಮನ್ನಿಸುತಲಿಂತೆಂದ ನಸುನಗುತ |
ನದಿಯ ತೀರದಿ ಯೋಚನಾ ಮಗ್ನನಾದೆಯೇನದನೆನಗೆ ಬೆಸಸೆನ್ನಲು || ೧ || || 121 ||

**ಸುರುಟಿ - ಏಕ**
ನಾರದಮುನಿಪಾಲ | ಲಾಲಿಸು |
ವಾರಿಜಭವಬಾಲ ||
ನೀರಜಗಂಧಿನಿ | ಯೋರುವಳೀನದಿ |
ತೀರದಿ ತೋರುತ | ಸಾರಿದಳೀಗಲು || ೧ ||

ಶೈಲಜೆಯೆಂದವಳ | ಸರಿಸದಿ |
ಕೇಳಲು ಪಾತಾಳ ||
ವಾಳುವ ಮಯಸುತೆ | ಮಂಡೋದರಿಯೆಂ |
ದಾ ಲಲಿತಾಂಗಿಯು | ಪೇಳಿದಳೆನ್ನೊಳು || ೨ ||

ನಿಜವೊ ಪುಸಿಯೊ ಯೆಂದು | ತಿಳಿಯೆನು |
ಅಜಭವನೀನಿಂದು ||
ಗಜಗಮನೆಯಪರಿಯೊರೆಯೈ ದೇವನೆ | ಭಜಿಸುವೆನನುದಿನ |
ಸುಜನಶಿಖಾಮಣಿ || ೩ || || 124 ||

**ಸಾಂಗತ್ಯ - ರೂಪಕ**
ಬೇಡವೈ ನಿನ್ನಯ ದೇವ ನಾನಾಗಲು |
ಮೂಢನೆಂದೆನ್ನ ಭಾವಿಪೆಯ ||
ನೋಡಲು ಬ್ರಹ್ಮಚಾರಿಯು ನಾನು ಮಡದಿಯ |
ಮಾಡಿಕೊಂಡಿಲ್ಲವೆಂದೆನಲು || ೧ ||

ದನುಜನಾಕ್ಷಣ ನಗುತಿಂತೆಂದ ನಾರದ |
ಮುನಿಯೊಳು ಪರಶಿವಸತಿಯ ||
ವಿನಹ ಬೇರಾದರ ಬಯಸೆ ನಾ ಪೇಳಿದ |
ವನಜಾಕ್ಷಿ ಪಾರ್ವತಿಯಹುದೆ || ೨ ||

ನಾರದನೆಂದ ಪರಾಶಕ್ತಿಯನ್ನು ಕಾ |
ಮಾರಿಯು ಮಯನೊಡನಿರಿಸಿ ||
ಆರು ಕೇಳ್ವರು ಆತನ ಕುಮಾರಿಯೆಂಬಂತೆ |
ಸಾರಲು ಪೇಳಿಹನವಗೆ || ೩ || || 127 ||

**ಕೇದಾರಗೌಳ - ಅಷ್ಟ**
ಎನಲು ಕೇಳುತ ರಾವಣೇಶ್ವರ ನಾರದ |
ಮುನಿಪಗೆ ಕೈಮುಗಿದು ||
ಎನಗೆ ತೋರೈ ಮಯನಿರುವ ಠಾವೆನಲಾತ |
ನನು ಮುನಿಯೊಡಗೊಳ್ಳುತ || ೧ ||

ನಾರದ ಪಾತಾಳವನು ತೋರುತ್ತೈದಲು |
ವೀರ ಲಂಕಾಧೀಶನು ||
ಸಾರಿ ಮಯಾಖ್ಯನ ಪುರಕೈದುತಿರೆ ಪ್ರತಿ |
ಹಾರಿಯ ಕಂಡೆಂದನು || ೨ ||

ಚಾರನೆ ಪೋಗಿ ನಿಮ್ಮೊಡೆಯಂಗೆ ನಾ ಬಂದ |
ವಾರತೆ ಪೇಳು ಬೇಗ ||
ಸಾರೆನುತೊರೆಯಲು ಪುರರಕ್ಷ ಮಯಗೆ ವಿ |
ಸ್ತಾರದೊಳಿಂತೆಂದನು || ೩ || || 130 ||

**ಮುಖಾರಿ - ಏಕ**
ಮಯರಾಜ ಲಾಲಿಸೆಮ್ಮ ನುಡಿಯ |
ಪೇಳುವೆನೆಮ್ಮೊಡೆಯ || ಪ ||
ಮೆರೆವ ಲಂಕಾಪುರದ ನಾಥ | ಸುರರಿಪು ರಾವಣ ವಿಖ್ಯಾತ ||
ತ್ವರಿತದಿ ನಡೆತಂ | ದೊರೆದನು ನಿನ್ನಯ |
ಪರಮಸವಾರಿಯು | ಬರಬೇಕಂತೆ || ೧ || || 131 ||

**ಆರ್ಯಸವಾಯಿ - ಏಕ**
ಚಾರಕನೊರೆದಿಹ ವಚನವ ಲಾಲಿಸಿ | ಭೋರನೆ ನಡೆತಂದಾಮಯನು ||
ಭೂರಿವೈಭವದಿ ಕರೆತಂದಾತನ | ನೇರಿಸಿ ಪೀಠವನರುಹಿದನು || ೧ || || 132 ||

**ಸೌರಾಷ್ಟ್ರ - ತ್ರಿವುಡೆ**
ದಶಶಿರನ ಮನ್ನಿಸುತ ಪ್ರೇಮದಿ |
ಯೆಸೆವ ಪೀಠದಿ ಕುಳ್ಳಿರಿಸಿ ಕೈ |
ಕಸೆ ವಿಭೀಷಣ ಕುಂಭಕರ್ಣರ | ಕ್ಷೇಮವರಿತು || ೧ ||

ಬಂದ ಕಾರಣವೇನು ಪೇಳೆನ |
ಲೆಂದ ರಾವಣ ತಪದಿ ಮೆಚ್ಚಿಸು |
ತಿಂದುಧರನೊಳು ಸತಿಯ ನೀಡೆನೆ | ವಂದಿಸುತ್ತ || ೨ ||

ಭೂತವನು ಶೃಂಗರಿಸಿ ನೀಡಿದ |
ನಾಥೆಯನು ನಿನ್ನಲ್ಲಿಯಡಗಿಸಿ |
ಭೂತನಾಥನ ಕಪಟ ತಿಳಿವರೆ | ಬಂದೆನಿಲ್ಲಿ || ೩ || || 135 ||

**ಮಾರವಿ - ಏಕ**
ಪಾತಾಳಾಧಿಪ ಪ್ರೇಮದೋಳೀವುದು |
ಭೂತೇಶನ ಸತಿಯ ||
ಸೋತಿಹೆನಾಕೆಯ ರೂಪಿಗೆ ಯೆನ್ನಯ |
ಮಾತನು ಕೇಳಯ್ಯ || ೧ || || 136 ||

**ಸಾಂಗತ್ಯ - ರೂಪಕ**
ಶಿವನ ತಪದಿ ಮೆಚ್ಚಿಸುತ್ತ ನೀನಾತನ |
ಧವೆಯ ಕೇಳಿದುದಾವ ನೀತಿ ||
ವಿವರಿಸು ನಡತೆ ತ | ಪ್ಪಿಂಕಾರ್ಯಗೈದುದೇ |
ಕವನೀಶ ನೀನು ತೀವ್ರದೊಳು || ೧ || || 137 ||

**ಮಾರವಿ - ಏಕ**
ದೊರೆ ಪೇಳೆಲ್ಲರು ದೇವನ ಮೆಚ್ಚಿಪ |
ಪರಿಯೇನೆನುತೀಗ ||
ಹರನನು ಸೇವಿಸುತಾತನ ಸತಿಯಹ |
ಗಿರಿಜೆಯ ಯಾಚಿಸಿದೆ || ೧ || || 138 ||

**ಸಾಂಗತ್ಯ - ರೂಪಕ**
ಭುವನೇಶ ಮುಕ್ತಿಯ ಪೊಂದಲು ಕೆಲವರು |
ಶಿವನನ್ನು ಪೂಜಿಸುತಿಹರು ||
ವಿವರಿಸೆ ಹಲವರು ಕಾಮಿತಕೋಸುಗ |
ಅವನಿಯೊಳ್ತಪವಗೈಯುವವರು || ೧ || || 139 ||

**ಮಾರವಿ - ಏಕ**
ಕೇಳೆನು ನಾ ಪರಶಾಶ್ವತ ಮೋಕ್ಷವ |
ಫಾಲಾಕ್ಷನ ಕೂಡೆ |
ಲೀಲೆಯೊಳೈಹಿಕ ಕಾಮಿತ ಪಡೆಯಲು |
ಶೈಲಜೆಯನು ಕೇಳ್ದ || ೧ || || 140 ||

**ಸಾಂಗತ್ಯ - ರೂಪಕ**
ಪರರಿಗೆ ಕೇಡಾಗದಂದದಿ ಕಾಮಿತ |
ವರಗಳ ಪಡೆವುದು ಶುಭವು ||
ತೊರೆದು ದಾತನ ಕೂಡೆ ಮಡದಿಯ ಕೇಳ್ವರೆ |
ಸರಿಬಂತೆ ಮನಕೆ ವಿಕ್ರಮನೆ || ೧ || || 141 ||

**ಮಾರವಿ - ಏಕ**
ಏತಕೆ ಪರಶಿವ ಅಸ್ತೆಂದಿತ್ತನು |
ನಾಥೆಯ ಪೇಳೀಗ ||
ಖಾತಿಯ ತಾಳುತ ಕೊಡೆನೆನ್ನದೆ ಸಂ |
ಪ್ರೀತಿಯೊಳಿತ್ತಿಹನು || ೧ || || 142 ||

**ಸಾಂಗತ್ಯ - ರೂಪಕ**
ನೀತಿಯ ಕೇಳಹಲ್ಯೆಯ ಪಿಂದೆ ದೇವೇಂದ್ರ |
ಸೋತು ಮೋಸದಿ ಸಂಭೋಗಿಸಲು ||
ಖ್ಯಾತ ಗೌತಮನಿದನರಿಯುತ್ತ ಶಪಿಸಿದ |
ಖಾತಿಯಿಂದವರುಭಯರಿಗೆ || ೧ || || 143 ||

**ಮಾರವಿ - ಏಕ**
ಪತಿಯನು ತೊರೆಯಿಸಿ ಶಕ್ರನು ಮೋಸದಿ |
ಸತಿಯನು ಕೆಡಿಸಿದಕೆ ||
ಖತಿಯಿಂ ಗೌತಮರೀರ್ವರ ಶಪಿಸಿದ |
ಕಥೆಯನು ಕೇಳಿಹೆನು || ೧ || || 144 ||

**ಸಾಂಗತ್ಯ - ರೂಪಕ**
ಪಿಂದೆ ಭಸ್ಮಾಸುರ ನಿನ್ನಂತೆ ತಪಗೈದು |
ಚಂದ್ರಚೂಡನ ಮೆಚ್ಚಿಸುತ್ತ ||
ಪೊಂದಿ ಭಸ್ಮದ ಕರ ದೈವತಂತ್ರದಿ ಸುಟ್ಟು |
ಸಂದಿಹ ಕಥೆಯರಿತಿಹೆಯ || ೧ || || 145 ||

**ಮಾರವಿ - ಏಕ**
ವರವಿತ್ತಾತನ ದಹಿಸಿ ಪರೀಕ್ಷಿಸ |
ಉರಿಹಸ್ತವನಿಡಲು ||
ತೆರಳಿರೆ ಮಾಯದಿ ತನ್ನ ಶಿರಕೆ ಕರ |
ವಿರಿಸಲು ಬೆಂದಿಹನು || ೧ || || 146 ||

**ಸಾಂಗತ್ಯ - ರೂಪಕ**
ಇರುವಳೆನ್ನಯ ಸುತೆ ಪೆಸರು ಮಂಡೋದರಿ |
ಹರನ ಮಡದಿಯಾಕೆಯಲ್ಲ ||
ಮರುಳರಂದದಿ ಯೆನ್ನ ಕೂಡಿಂತು ಪೇಳದೆ |
ತೆರಳು ಬಂದಂದದಿ ಪುರಕೆ || ೧ || || 147 ||

**ಮಾರವಿ - ಏಕ**
ಧಿರುರೆ ಶಭಾಸಾಮಂಡೋದರಿಯೆಂ |
ದಿರುವಳೆ ಗಿರಿಬಾಲೆ ||
ಬರಿದೇಕೀತೆರ ಠಕ್ಕಿಪೆಯೆನ್ನನು |
ಕರುಣದಿ ನೀಡವಳ || ೧ || || 148 ||

**ಸಾಂಗತ್ಯ - ರೂಪಕ**
ಎನ್ನ ಕುಮಾರಿಯನೀಯಲಾರೆನು ದಿಟ |
ನಿನ್ನಂಥ ಕಾಮುಕರಿಂಗೆ ||
ನಿನ್ನೊಡನಾಕೆಯ ಗಿರಿಜೆಯೆಂದೊರೆದರಾ |
ರೆನ್ನುವದನು ಬೆಸಸೆನಲು || ೧ || || 149 ||

**ಮಾರವಿ - ಏಕ**
ನಾರದ ಮುನಿವರ ಪೇಳಿದ ನಿನ್ನೊಳು |
ಮಾರಾಂತಕನರಸಿ ||
ಸೇರಿಹಳೆಂಬುದನರಿಯುತ ಬಂದೀ |
ಗೀರೀತಿಯೊಳೊರೆದೆ || ೧ || || 150 ||

**ಭೈರವಿ - ಅಷ್ಟ**
ವೇದವತಿಯ ಕೆಣಕಿ | ಶಾಪವಗೊಂಡೆ |
ನೀ ಧರೆಯೊಳು ಕುಹಕಿ ||
ಸಾದರದಿಂದ ಬಂದಂತೆ ಪೋಗದಿರೆ ವಿ |
ಷಾದಕೀಡಾಪೆ ಕೇಳು || ೧ || || 151 ||

**ಕೇದಾರಗೌಳ - ಝಂಪೆ**
ನೀನು ತಿಳಿದಾತನಲ್ಲ | ನಡೆದಿರುವು |
ದೇನೆಂಬ ವಿಷಯವೆಲ್ಲ ||
ಮಾನಿನಿಯರಿಂಗೆ ತಪವು | ಸಲ್ಲದೆಂ |
ದಾನಂತುಗೈದೆ ದಿಟವು || ೧ || || 152 ||

**ಭೈರವಿ - ಅಷ್ಟ**
ವಾಲಿಯ ಗೆಲ್ವೆನೆಂದು | ಪಿಡಿಯಲ್ಕೈದಿ |
ಬಾಲದಿ ಸಿಕ್ಕಿ ನೊಂದು ||
ಹೇಳಲಾಗದ ವ್ಯಥೆಯಾಂತು ಸಖ್ಯತೆಗೊಂಡ |
ಖೂಳ ನೀನಲ್ಲವೇನೈ || ೧ || || 153 ||

**ಕೇದಾರಗೌಳ - ಝಂಪೆ**
ಕೋಡಗನು ಧುರದೊಳಿರಲು | ಪಿಡಿದೆನ್ನ |
ಮೋಡಿಯಿಂ ಬಿಗಿದ ಕೇಳು ||
ರೂಢಿಯೊಳಗರಿತನೆನ್ನ | ವಿಕ್ರಮವ |
ಮಾಡಿದನು ಸಖ್ಯವನ್ನ || ೧ || || 154 ||

**ಭೈರವಿ - ಅಷ್ಟ**
ಕೈಲಾಸ ಕೀಳಲೆಂದು | ನೆಗಹೆ ಪೋಗಿ |
ಕೈಲಾಗಲಾರದಂದು ||
ನೀಲಕಂಧರನಿದ ನರಿಯುತ್ತ ಗಿರಿ ತನ್ನ|
ಕಾಲೊಳೊತ್ತಲು ಚೀರಿದೆ || ೧ || || 155 ||

**ಕೇದಾರಗೌಳ - ಝಂಪೆ**
ಆರು ಪೇಳಿದರು ನಿನಗೆ | ಯೀ ಕಥೆಯ |
ತೋರಿದಂದದಿ ಸುಮ್ಮಗೆ ||
ಸಾರದಿರು ಶಿವನೊಲಿಯುತ | ಕೊಟ್ಟಿರುವ |
ನೀ ರಾವಣೇಂದ್ರಾಂಕಿತ || ೧ || || 156 ||

**ಭೈರವಿ - ಅಷ್ಟ**
ಪಿಂದೆ ಕಾರ್ತವೀರ್ಯನು | ತಪದೊಳಿರ |
ಲಂದು ಯುದ್ಧಕ್ಕೆ ನೀನು ||
ಬಂದವ ನದಿಗಡ್ಡವಿಟ್ಟ ಕೈ ತೆಗೆದಿರೆ |
ಸಂದೆ ವಾರಿಯೊಳು ದೂರ || ೧ || || 157 ||

**ಕೇದಾರಗೌಳ - ಝಂಪೆ**
ಕೇಳಿ ಜಪ ಹೋಮಗಳೊಳು | ಇಹನೊಡನೆ |
ಕಾಳಗವನೆಸಗೆ ಕೇಳು ||
ಫಾಲನೇತ್ರನು ಮುನಿವನು | ಯೆಂದೆನುತ |
ನಾ ಲಂಕೆಗೈತಂದೆನು || ೧ || || 158 ||

**ಭೈರವಿ - ಅಷ್ಟ**
ಎಷ್ಟು ಪೇಳ್ದರು ನಿನಗೆ | ಕುಮಾರಿಯ |
ಕೊಟ್ಟು ಕಳೆಯೆ ಸುಮ್ಮಗೆ ||
ಬಿಟ್ಟು ಛಲವ ಪುರಕೈದದಿರಲು ನಿನ್ನ |
ನಟ್ಟುವೆ ಶೈಮಿನಿಗೆ || ೧ || || 159 ||

**ಶಂಕರಾಭರಣ - ಮಟ್ಟೆ**
ದುರುಳಮಯನೆ ಶೌರ್ಯ ನಿನ್ನೊ |
ಳಿರುವುದೆಂಬುದರಿತೆನೀಗ |
ಪರಿಯ ಕಾಂಬೆನಿಂದು ನಾ ಸ | ಮರದ ಮಧ್ಯದಿ || ೧ ||

ಎನುತ ಖಾತಿಯಿಂದಲೊಂದು |
ಕಣೆಯನೆಸೆಯೆ ಕಡಿದು ಮಯನು |
ಘನತರಾಸ್ತ್ರಗಳನು ರಾ | ವಣನಿಗೆಚ್ಚನು || ೨ ||

ಎಸೆದ ಸರಳ ತರಿದು ಮಯನ |
ವಶದೊಳಿರುವ ಧನುವ ಮುರಿಯೆ |
ಕಸುವಿನಿಂದ ಗದೆಯಗೊಂಡು | ಬಿಸುಟ ನೆತ್ತಿಗೆ || ೩ ||

ಬರುವ ಗದೆಯ ರಾವಣೇಂದ್ರ |
ತರಿಯೆ ಮಯಾಸುರನು ಖಡ್ಗ |
ಕರದಿ ಪಿಡಿದು ತೂಗುತೆಂದ | ಭರಿತ ರೋಷದಿ || ೪ || || 163 ||

**ಭಾಮಿನಿ**
ಚೋರರಾವಣ ನಿನ್ನ ವಿಕ್ರಮ |
ವೀರಣಾಂಗಣದಲ್ಲಿ ಕಾಂಬೆನು |
ತೋರು ಸಾಹಸವೆಂದು ಮುಂಬರೆ ರಾವಣೇಶ್ವರನು ||
ನಾರಿ ಶಿವೆಯನು ಕೊಡದೆ ಸಾಯುವೆ |
ಪೌರುಷವ ತೋರೆನುತ ಕರದೊಳು |

ಕೂರಸಿಯ ನೆಗಹಲ್ಕೆ ನಾರದ ಬಂದು ತಡೆದೆಂದ || ೧ || || 164 ||

**ನವರೋಜು - ಏಕ**
ಕದನವ ನಿಲ್ಲಿಪುದೀಗ | ಬಲು |
ಮುದವನು ತಾಳಿರಿ ಬೇಗ ||
ಸದಯರೆ ನಡೆದಿಹ ಪರಿಯನು ಬೆಸಸಲಿ |
ಕದ ತೀರ್ಮಾನಿಪೆ ಬಿಡಿಬಿಡಿ ಖಾತಿಯ || ೧ ||

ರಣದೊಳು ಶೂರರು ನಿಜವು | ನಿಮ |
ಗೆಣಿಕೆಯೆ ಪೇಳ್ವೊಜಗವು ||
ಹೆಣಗಲು ಫಾಸಿಯು ಕಾಣದು ನಿಮ್ಮೊಳು |
ಗುಣದಿಂದಾಯುಧವಿಳುಹಿರಿ ಪೊಡವಿಗೆ || ೨ ||

ಕಾರಣವೇನಿದಕೆಂದು | ಮುನಿ |
ನಾರದ ಪೇಳಲಿಕಂದು ||
ವೀರ ಮಯಾಸುರನುಸುರಿದನಾತಗೆ |
ಘೋರ ಸಮರಪರಿಯನು ವಿಸ್ತಾರದಿ || ೩ || || 167 ||

**ಭಾಮಿನಿ**
ಸುರಮುನೀಂದ್ರನೆ ಲಾಲಿಸೆನ್ನೊಳು |
ಧುರವಗೈದಿಹನೀತ ಶಿವೆಯೆ |
ನ್ನರಮನೆಯೊಳಿಹುದಾಗಿ ನೀ ಪೇಳಿರುವೆಯೆಂದೆನುತ ||
ತ್ವರಿತದಿಂದಾಕೆಯನು ನೀಡೆನು |
ತಿರುವ ನಾನಿದನರಿಯೆ ಮತಿಗೆ |
ಟ್ಟಿರುವನಿದರ ನಿಜಾಂಶವೇನೆನಲೆಂದನಮರಮುನಿ || ೧ || || 168 ||

**ಬೇಗಡೆ - ಏಕ**
ಆಲಿಸೈ ಮಯರಾಜ ಯನ್ನೊಡನೆ | ಕೇಳಿದುದಕುತ್ತರ |
ಪೇಳುವೆನು ನಡೆದಿರುವ ಕಥನವನೆ ||
ನೀಲಕುಂತಳೆ ನಿನ್ನ ಸುತೆ ಶರ |
ಕೇಳಿ ಗೈದಿರೆ ಕಾಣುತೀತನ |
ಮೇಲೆ ಮನವನ್ನಿರಿಸಿ ಮೋಹವ |
ತಾಳಿಹಳು ಸತಿಯಾಗಲಿಚ್ಛಿಸಿ || ೧ ||

ದೊರೆಯೆ ಯೋಚಿಸದೀಗ ತವ ಸುತೆಯ | ಕರೆತಂದು ರಾವಣ |
ಗೆರೆದು ಶಿವೆಯೆಂದೆನುತ ನೀಡಯ್ಯ ||
ಪರಮ ಮಂಗಳವಹುದು ಮುಂದಕೆ |
ಸುರನರೋರಗರಿಂಗೆ ಬೆದರದ |
ಧುರ ಪರಾಕ್ರಮಿ ಹರನ ಪ್ರೇಮದ |
ಶರಣನಿವ ಸಾಮಾನ್ಯನಲ್ಲೈ || ೨ ||

ಸಾರುವೆನು ನಾನೀಗ ಸುರಪುರಕೆ | ಸಂತಸದಿ ಮೈತ್ರಿಯ |
ವೀರನಿಂ ಸಂಪಾದಿಸುವುದಕ್ಕೆ ||
ನಾರಿರತುನವನೀವುದೆನ್ನುತ |
ನಾರದನು ಕೈಯ್ಯೊಳಗಿರುವ ತಂ |
ಬೂರಿಯಂ ಬಾರಿಸುತ ಪೋಗಲು |
ವೀರ ಮಯ ರಾವಣನೊಳೆಂದನು || ೩ || || 171 ||

**ಕಾಂಭೋದಿ - ಝಂಪೆ**
ರಾವಣೇಶ್ವರ ನಿನ್ನ ವಿಕ್ರಮಕೆ ಮೆಚ್ಚಿದೆನು |
ಭೂವಳಯದೊಳು ಶೂರನೆಂದು ||
ಭಾವಕಿಯ ನಿನಗೆ ಕಲ್ಯಾಣಗೈಯುವೆನೇಕ |
ಭಾವದಿಂದೊಲಿಪುದಾಕೆಯನು || ೧ ||

ಖಾತಿಯಂ ತೊರೆದು ನಡೆತಹುದೆನಲು ದಶಕಂಠ |
ಪ್ರೀತಿಯಿಂ ಮಯನ ಬಿಗಿದಪ್ಪಿ ||
ಸಾತಿಶಯದಿಂದುಭಯರೈದಿ ಕರೆದೆಂದ ಮಯ |
ಜಾತೆ ಮಂಡೋದರಿಯನಂದು || ೨ ||

ತರಳೆ ನಿನ್ನಯ ಮನವು ದಶಕಂಧರಗೆ ಸೋತ |
ಪರಿಯ ನಾರದರಿಂದಲರಿತೆ ||
ಹರುಷವಾಯಿತು ನಿನ್ನ ಲಂಕಾಧಿಪಾಲಕಗೆ |
ಪರಿಣಯವ ವಿರಚಿಸುವೆನವ್ವ || ೩ || || 174 ||

**ಭಾಮಿನಿ**
ಎಂದು ಮಯ ಸುತೆಯಳನು ರಾವಣ |
ಗಂದು ವಿಧಿವತ್ತಾಗಿ ವಿಬುಧರ |
ವೃಂದದಪ್ಪಣೆಯಿಂದ ಧಾರೆಯನೆರೆದ ಸಂಭ್ರಮದಿ ||
ಅಂದು ನಿಶಿಯೊಳ್ನಿಷೇಕವೆಸಗುತ |
ಲಿಂದುಮುಖಿ ಮಯಸುತೆಯ ಶಯನದ |
ಮಂದಿರಕೆ ಸೇರಿಸಲು ಕಂಡಿಂತೆಂದ ಸತಿಯೊಡನೆ || ೧ || || 175 ||

**ಕಲ್ಯಾಣಿ - ಅಷ್ಟ**
ವಾ | ರಣಗಮನೆ | ಗುಣಸದನೆ | ತ್ರಿಣಯನಂಗನೆ ||
ದನುಜ ಕುಲಾ | ಧೀಶ ನಾನೆಂ | ದೆಣಿಸೆಲೆ ಜಾಣೆ || ೧ ||

ಪೂ | ಶರವೆಸೆದ | ಸ್ಮರನು ಮದ | ಗರುವದಿಂದದ ||
ತರುಣಿ ನೀನು | ತಣಿಸಿ ಬೀರು | ಹರುಷದಿಂ ಮುದ || ೨ ||

ಕೋ | ಮಲವದನೆ | ಛಲವಿದೇನೆ | ತಿಳುಹು ಬೇಗನೆ ||
ಸುಲಲಿತಾಂಗಿ | ಪರಶಿವೆ ಕೋ | ಕಿಲ ಮೃದುಗಾನೆ || ೩ || || 178 ||

**ಕಂದಪದ್ಯ**
ಈ ತೆರದಿಂದಾನಿಶಿ ಮಯ |
ಜಾತೆಯ ಕೂಡೆ ರಮಿಸಿ ಮರುದಿನದುದಯದೊಳಾ ||
ಮಾತುಳನಾಣತಿ ಪೊಂದುತ |
ನಾಥೆಯೊಡನೆ ಲಂಕಾಪುರಕೈದಿದ ಭರದಿಂ || ೧ || || 179 ||

**ಆರ್ಯಸವಾಯಿ - ಏಕ**
ಜನನಿಗೆ ವಂದಿಸುತಾ ದಶಕಂಠನು |
ವಿನಯದಿ ಪೇಳಿದ ಶಿವನೊಲಿದು ||
ಎನಗಿತ್ತನು ದರ್ಶನ ವಾಂಛಿತಗಳ |
ಯೆನಲೆಂದಳು ಸಂತಸ ತಳೆದು || ೧ || || 180 ||

**ಕೇದಾರಗೌಳ - ಅಷ್ಟ**
ಹರುಷದಿಂದೈತಂದು ಚರಣಕ್ಕೆ ನಮಿಸಿದ |
ತರಳನ ಪಿಡಿದೆತ್ತುತ ||
ಪರಮಪಾವನವಾಯಿತರಸ ಯೆಮ್ಮಯ ವಂಶ |
ಹರಲಿಂಗವನು ತಂದೆಯ || ೧ ||

ಲಿಂಗವೇತಕೆ ತಾಯೆ ಗಂಗಾಧರನ ಪ್ರಿಯೆ |
ಶೃಂಗಾರಶಿವೆಯ ತಂದೆ ||
ತುಂಗವೈಭವದಿಂದ ಸಂಗೀತಲೋಲೆಯ |
ಮಂಗಳೆಯನ್ನೊಲಿದೆ || ೨ ||

ಮುಚ್ಚುಮುಚ್ಚೆಲೊ ಬಾಯ ಹುಚ್ಚರಂದದಿ ನೀನು |
ಹೆಚ್ಚು ಮಾತಾಡದಿರು ||
ನಚ್ಚಿನ ಪ್ರೇಮದಿ ಸಚ್ಚರಿತ ಶಿವನ |
ಮೆಚ್ಚಿದಾಕೆಯ ತಹುದೆ || ೩ ||

ಭೂತಪಾಲಕನನು ಪ್ರೀತಿಯಿಂದೊಲಿಸುತ್ತ |
ನಾಥೆಯ ಕೇಳಿದಕೆ ||
ಸಾತಿಶಯದೊಳೊಲಿದಾತನು ಶೈಲಸಂ |
ಜಾತೆಯನಿತ್ತಿಹನು || ೪ ||

ಮಾರವೈರಿಯ ಪತ್ನಿ ಧಾರುಣಿಯೊಳು ದುಷ್ಟ |
ವಾರವಿನಾಶವನು ||
ಸಾರಿಗೈಯ್ಯುವ ಸುವಿಚಾರವನರಿಯೆಯ |
ಪೋರ ಪಿಂದೊಪ್ಪಿಸಿ ಬಾ || ೫ ||

ಅವ ಪರಮೇಶ್ವರನಿವ ರಾವಣೇಶ್ವರ |
ಭುವನದೊಳತಿಸುಂದರ ||
ವಿವರವನರಿಯುತ್ತ ಶಿವೆಯ ತಂದಿಹೆನಮ್ಮ |
ತವ ಕಾರುಣ್ಯದೊಳು ನಾನು || ೬ ||

ಆದಿಶಕ್ತಿಯೆ ಸುತ ಗೈದಪರಾಧವ |
ಮೋದದಿ ಕ್ಷಮಿಸು ನೀನು ||
ಭೇದವಿಡದಿರೆನ್ನುತೈದಿ ನಿಂದಿರುವ ಮಂ |
ಡೋದರಿಗೆರಗಿದಳು || ೭ ||

ಅಸಮ ಸಾಹಸಿ ನಿನ್ನ ಬಸುರಿನೊಳೈತಂದ |
ದಶಕಂಠ ನಾನಾಗಿರೆ ||
ವಸುಧೆಯೊಳಗೆ ನೀನು ಸೊಸೆಗೆ ವಂದಿಪುದೇನು |
ಬೆಸಸೆನ್ನ ಕೂಡೆಂದನು || ೮ || || 188 ||

**ಕಂದಪದ್ಯ**
ಸುತನಿಂತೊರೆದುದನಾಲಿಸಿ |
ಖತಿಯಿಂ ಕೈಕಸೆಯಾತನ ನಿಂದಿಸುತ್ತೈತಂ ||
ದತಿಭಕ್ತಿಯೊಳೆರಗಿದಳಾ |
ಸತಿ ಮಂಡೋದರಿಯಂ ಶಿವನರಸಿಯೆನುತ್ತಂ || ೧ || || 189 ||

**ಸಾರಂಗ - ಅಷ್ಟ**
ಶೈಲಜಾತೆ | ಪಾಲಿಸು ಮಾತೆ || ಪ ||
ಬಾಲಕಗೈದಪರಾಧವ ಮನ್ನಿಸು |
ನೀಲಕಂಧರನ ಪ್ರೀತೆ || ವಿಲಾಸಿತೆ || ಅ.ಪ ||
ಕೊಡುಯೆಮಗಿಷ್ಟವ ನೀ | ಸಂತೋಷದಿ |
ಮೃಡನರಸಿಯೆ ನಿನ್ನ ನೀ ||
ಪೊಡವಿಲಿ ನಂಬಿ ಪೂಜಿಪೆನನುದಿನದೊಳು |
ಖಡುಗಧಾರಿಣಿ ಕರುಣಿ || ಕಾತ್ಯಾಯಿನಿ || ೧ ||

ಶಂಕರಪ್ರೀತೆ ನಿನ್ನ | ತಂದಿಹ ಶಿವ |
ಕಿಂಕರನೀರಾವಣ ||
ಸಂಕಟಹರೆ ಕೋಪಗೈಯ್ಯದೆಮ್ಮನು ಕಾಯೆ |
ಪಂಕಜಾಕ್ಷಿಯೆ ವಂದನ || ತೋರು ಪ್ರಸನ್ನ || ೨ || || 191 ||

**ಸಾವೇರಿ - ಝಂಪೆ**
ಯೆಂದ ವಚನವ ಲಾಲಿ | ಸುತ್ತ ಮಯಜಾತೆ ಬಲ |
ಬಂದು ಕೈಕಸೆ ಪಾದಕೆರಗಿ ||
ಇಂದಿದೇತಕೆ ಪೇಳು| ವಿರಿ ಅತ್ತೆ ನಾನಿಮ್ಮ |
ನಂದನನ ವಲಿದ ಸತಿ ದಿಟವು || ೧ || || 192 ||

**ಕೇದಾರಗೌಳ - ಅಷ್ಟ**
ತಾಯೆ ನೀ ಯೇನುಬೇಕಾದರು ಪೇಳಾದಿ |
ಮಾಯಾಸ್ವರೂಪಿಣಿಯು ||
ಕಾಯೆಮ್ಮ ದೈತ್ಯಕುಲವನಾನಂದದಿ ಹರ |
ಜಾಯೆಯೆಂದೆರಗಿದಳು || ೧ || || 193 ||

**ಸಾವೇರಿ - ಝಂಪೆ**
ಶಂಕೆ ಯಾತಕೆ ತಾಳು | ತಿಹಿರಿ ದಿಟ ನಾನಲ್ಲ |
ಶಂಕರನ ಪತ್ನಿ ನಿಮ್ಮಾಣೆ ||
ಲಂಕೇಶನರಸಿ ಮಂ | ಡೋದರಿಯೆನುತ್ತ ನಾ |
ಮಾಂಕಿತವು ನಿಮ್ಮ ವಂದಿಪೆನು || ೧ || || 194 ||

**ಕೇದಾರಗೌಳ - ಅಷ್ಟ**
ಕೇಳಬಾರದ ವರ ಕೇಳಿದ ಯೆನ್ನ ಈ |
ಬಾಲನ ಮನ್ನಿಸುತ ||
ಕಾಲ ಕಾಲದೊಳೆಮ್ಮ ಪೂಜೆಯ ಕೊಳ್ಳುಮ್ಮ |
ಶೈಲಜೆ ಮಣಿಯುವೆನು || ೧ || || 195 ||

**ಸಾವೇರಿ - ಝಂಪೆ**
ಮಯರಾಜ ಮತ್ಪಿತನು | ದಿಟವೀವಚನ ಕೇಳಿ |
ದಯಮಾಡಿ ನನಗೆರಗಬೇಡಿ ||
ಭಯವಾಪುದೈಸೆ ಯೆ | ನ್ನಯ್ಯ ಸಂತಸದಿ ಪರಿ |
ಣಯವೆಸಗಿ ಕೊಟ್ಟ ತವಸುತಗೆ || ೧ || || 196 ||

**ವಾರ್ಧಕ**

ಕುಶನೆ ಕೇಳಿಂತೆಂದ ಮಂಡೋದರಿಯನು ಕೈ |
ಕಸೆ ಮರಳಿ ಶಿವೆ ನೀನೆನುತ್ತ ವಂದಿಸಲಾಗ |
ಕುಸುಮಾಕ್ಷಿ ಮಯಜೆ ತಾ ಶಿವೆಯಲ್ಲವೆಂದೆರಗೆ ಉಸುರಿದಳು ದೈತ್ಯಮಾತೆ ||
ಶಶಿಧರನ ಕಾಂತೆ ಸದ್ಗುಣವಂತೆ ಸೀಮಂತೆ |
ದಶಗಳನ ತಪ್ಪ ಪಾಲಿಸಿ ಕಾಯೆ ಶ್ರಿತಗೇಯೆ |
ಝಶನಯನೆ ವಂದಿಸುವೆನೆಂದೆರಗೆ ಮಯತನುಜೆ ಸೊಸೆಯು ನಾನೆಂದು ನಮಿಸೆ || ೧ || || 197 ||

**ಮಾರವಿ - ಏಕ**

ಇಂತೀಪರಿಯೊಳಗೊರೆಯಲು ರಾವಣ |
ನಂತಕನಂದದೊಳು ||
ಕಾಂತೆಯ ಮುಡಿಪಿಡಿದೆಳೆಯುತಲಾಗ ಮ |
ಹಾಂತಪರಾಕ್ರಮದಿ || ೧ ||

ಭೂತೇಶ್ವರನಿಂ ನಿನ್ನನು ಪಡೆದಿರೆ |
ಭೂತಾಕಾರದೊಳು ||
ಏತಕೆಯೆನ್ನನು ವಂಚಿಸುತೈದಿದೆ |
ಪಾತಾಳಕೆ ಪಿಂದೆ || ೨ ||

ನಾರದಮುನಿ ಮತ್ತಾಮಯರೆಂದಿಹ |
ವಾರತೆ ಮರೆತಿಹೆಯ ||
ಪೋರಿಯೆ ಹರಸತಿಯಾಗಿದ್ದವೊಲ್ಕಳು |
ಈ ರೀತಿಯೊಳೊರೆದೆ || ೩ ||

ಪ್ರಾಯಶ್ಚಿತ್ತವ ಪೊಂದಿದಕೆನ್ನುತ |
ಲಾಯುವತಿಯನೊದೆಯೆ ||
ಹಾಯೆಂದುರುಳಲು ನಾರದಮುನಿವರ |
ನಾಯೆಡೆಗೈತಂದ || ೪ || || 201 ||

**ಭಾಮಿನಿ**

ಸುರಮುನೀಶ್ವರನಿತ್ತ ಲಂಕಾ |
ಪುರಕೆ ನಡೆತರೆ ಕಂಡು ಕೈಕಸೆ |
ಚರಣಕೆರಗುತಲುಪಚರಿಸಿ ಪೇಳಿದಳು ರಾವಣನು ||
ಹರನ ಮೆಚ್ಚಿಸುತಾತನಿಂದೀ |
ಗಿರಿಜೆಯನು ತಂದಿರುವೆನೆಂಬನು |
ತರುಣಿ ತಾ ಮಯಕುವರಿ ಯೆಂಬಳು ನಿಜವನರುಹೆನಲು || ೧ || || 202 ||

**ಕಾಪಿ - ಏಕ**

**(ಏನನುಸುರಲಿ | ಮಾನಿನಿಯಚಲು || ಎಂಬಂತೆ)**

ಆಲಿಸೌ ಗುಣ | ಶೀಲೆ ಕೈಕಸೆ | ಪೇಳ್ವವಚನವನು || ನಿನ್ನಯ |
ಬಾಲರಾವಣ | ಖೂಳತನದಿಂ | ಕೋಳುಗೊಂಡಿಹನು ||ಯೆನ್ನನು |
ಜಾಲ ಮಾತನು | ಪೇಳ್ವನೆಂಬರು | ಕೇಳಲಿನ್ನೇನು ||ಬಿಟ್ಟರೆ |
ಪಾಳು ಮಾಡುವ | ಲೀಲೆಯಿಂ ದೈ | ತ್ಯಾಳಿಯೆಲ್ಲವನು ||ಬೆಸಸುವೆ |
ಕಾಲಗಂತಿಮ | ಕಾಲ ತೋರಿದ | ಶೈಲರಾಜನ |
ಬಾಲೆ ಪತಿಯಹ | ನೀಲಕಂಠನ | ಮೇಲೆ ಭಕ್ತಿಯೊ |
ಳೇಳುವತ್ಸರ | ಕಾಲ ತಪಿಸಿದ || ೧ ||

ಹರನಿವನ ತಪ | ದಿರವನರಿಯುತ | ಭರಿತ ತೋಷದೊಳು || ತಾನೈ |
ತರಲು ಪಾದಕೆ | ಶಿರವ ಬಾಗುತ | ಲೊರೆದನಾತನೊಳು || ನೀನೆಂ |
ದಿರುವ ಲಿಂಗವ | ಮರೆತು ಶಿವೆಯಂ | ಕರುಣಿಸೆಂದೆನಲು || ಅಸ್ತೆಂ |
ದೊರೆದು ರಾವಣ | ಗಿರದೆ ಮಡದಿಯ | ಕರವಿಡಿದು ಕೊಡಲು || ವಂದಿಸಿ |
ಹರುಷದಿಂದೈ | ತರುವ ವೇಳೆಯ | ನರಿತು ನಾ ಹರಿ |
ತರಲು ಪಾದದೊ | ಳೆರಗಿ ನಡೆದಿಹ | ಪರಿಯನೆನ್ನೊಡ |
ನೊರೆಯೆ ಗಿರಿಜೆಯ | ತ್ವರೆಸಿ ಕಳುಹಿದೆ || ೨ || || 204 ||

**ಕಂದಪದ್ಯ**

ಗಿರಿಸುತೆಯೆಂದು ಮಯಾಸುರ |
ತರಳೆಯು ಮಂಡೋದರಿಯಂ ಕೊಡಿಸಿದೆನಿವಗಂ ||
ತರಹರಿಸದೆ ಸೊಸೆಯನ್ನುಪ |
ಚರಿಸುವುದೆಂದು ಮುನೀಶ್ವರನೈದಿದ ಭರದಿಂ || ೧ || || 205 ||

**ಭಾಮಿನಿ**

ಸುರಮುನಿಪನಿಂತೊರೆಯಲಾದಶ |
ಶಿರನನಾವರಿಸಿದ್ದ ಮಾಯೆಯು |
ಸರಿಯೆ ದಿಗ್ಭ್ರಮೆಯಾಂತು ತಾ ಮಹದೇವನೊಳು ಗೈದ ||
ದುರಿತವನು ನೆನೆಯುತ್ತ ಮನದೊಳು |
ಮರುಗಿ ಬಹುಪರಿಯಿಂದ ಮಾತೆಯೊ |
ಳೊರೆದ ತನ್ನಯ ತಪ್ಪ ಮನ್ನಿಪುದೆಂದು ಪದಕೆರಗಿ || ೧ || || 206 ||

**ಸುರುಟಿ - ಏಕ**

ಲಾಲಿಸೆನ್ನ ಮಾತೆ | ಸದ್ಗುಣ |
ಶೀಲೆಯೆ ಶುಭಚರಿತೆ ||
ಫಾಲಲೋಚನನ ವಲಿಸುತ ಲಿಂಗವ |
ಕೇಳಿ ತರುವೆ ಮನದಾಲೋಚನೆ ಬಿಡು || ೧ ||

ಅಂಗಜವೈರಿಯನು | ಅರ್ಚಿಸಿ |
ಲಿಂಗವ ಯಾಚಿಪೆನು ||
ಗಂಗಾಧರನೊಳು ಕ್ಷಮೆಯಾಚಿಸದಿರೆ |
ಮಂಗಳೆ ತವಸುತ ನಾನಲ್ಲವು ದಿಟ || ೨ ||

ಅಪ್ಪಣೆ ನೀಡುವುದು | ಬೇಗನೆ |
ಕ್ಷಿಪ್ರದಿ ತಾಯೊಲಿದು ||
ಸರ್ಪಾಭರಣನೊಲವ ಪೊಂದೆನುತಲಿ |
ಒಪ್ಪಿ ಕುಮಾರನ ಪರಸಿ ಬೀಳ್ಕೊಂಡಳು || ೩ || || 209 ||

**ಸೌರಾಷ್ಟ್ರ - ತ್ರಿವುಡೆ**

ಜನನಿಯಾಜ್ಞೆಯನಾಂತು ದಶಮುಖ |
ವನಿತೆಯನು ಸಂತೈಸಿ ಪೊರವಂ |
ಟನು ತ್ವರಿತ ಕೈಲಾಸಪರ್ವತ | ಕೈದುತಲ್ಲಿ || ೧ ||

ಮಾರವೈರಿಯ ವಿವಿಧ ಪುಷ್ಪ |
ಹಾರದಿಂ ಶೃಂಗರಿಸಿ ತಾ ಪಾ |
ದಾರವಿಂದಕೆ ಶಿರವಿರಿಸಿ ಸಾ | ಷ್ಟಾಂಗ ಗೈದ || ೨ || || 211 ||

**ಕಾಂಭೋದಿ - ಝಂಪೆ**
ಸಾಂಬಶಿವ ನಿನ್ನಡಿಯನರ್ಚಿಪೆನು ಮುದದಿಂದ |
ನಂಬಿ ಮಾನಸ ಪೂಜೆಗಯ್ವೆ ||
ಡಿಂಬವೆಂಬಾಲಯದಿ ಶಂಬರಾರಿಯ ವೈರಿ |
ಸಂಭ್ರಮದಿ ನಿನ್ನ ನಾ ನಿಲಿಸಿ || ೧ ||

ಕ್ರುದ್ಧ ನಿರ್ಮಾಲ್ಯವ ವಿಸರ್ಜಿಸುತ ನಿನ್ನ ಮನ |
ಶ್ರುದ್ಧೋದಕದಿ ಸ್ನಾನಗೈಸಿ ||
ಬುದ್ಧಿಯೆಂಬುವ ಕುಸುಮವಿಟ್ಟಲಂಕರಿಸುತ್ತ |
ಬದ್ಧ ಗಂಧಾಕ್ಷತೆಯನೀವೆ || ೨ ||

ಪನ್ನಗಾಭರಣ ನೈವೇದ್ಯವೆಸಗುವೆ ನಿನಗೆ |
ಯೆನ್ನ ಸಿರಿಸಂಪದಂಗಳನು ||
ಇನ್ನು ನಾ ವಿನಯನೀರಾಂಜನವ ವಿರಚಿಸುತ |
ಎನ್ನ ಭಕ್ತ್ಯಾರತಿಯ ಬೆಳಗಿ || ೩ ||

ಶಿವನೆ ನಾನಿಂತು ನಿನ್ನನು ಪೂಜಿಸಿದೆನೆನ್ನ |
ಭವದ ಕಿಲ್ಬಿಷಗಳನು ಕಳೆದು ||
ತವದರ್ಶನವನಿತ್ತು ಪರಿಪಾಲಿಸೈಯೊಲಿದು |
ಜವನಕಾಲನೆ ವಂದಿಸುವೆನು || ೪ ||

ಇಂತು ನುತಿಸಲು ಶಿವನು ಪ್ರತ್ಯಕ್ಷನಾಗದಿರೆ |
ಚಿಂತೆಯನಾಂತು ದಶಕಂಠ ||
ಮುಂತೇನಗೈವುದೆಂದಾಲೋಚಿಸುತ ತನ್ನ |
ಅಂತರಂಗದೊಳು ನಿರ್ಧರಿಸಿ || ೫ ||

ಶಿರಗಳೊಂಭತ್ತು ತುಂಡರಿಸುತುಪಹಾರಕೆಂ |
ದಿರಿಸಿ ಶಂಭೋ ಯೆನಲಿಕಾಗ ||
ಹರನು ಮೈದೋರಿ ತಲೆಗಳ ಮುನ್ನದಂತಿರಿಸಿ |
ವರವ ಬೇಡೆನಲು ರಾವಣನು || ೬ ||

ಭಕ್ತಪರಿಪಾಲ ನಿನ್ನೊಳು ಹಿಂದೆ ನಾನಾದಿ |
ಶಕ್ತಿಯನು ಯಾಚಿಸಿದೆ ಮರೆತು ||
ಮುಕ್ತಿದಾತನೆ ನಿನ್ನ ಪ್ರಾಣಲಿಂಗವನೆನಗೆ |
ಇತ್ತು ಕಾಪಾಡೆಂದ ನಮಿಸಿ || ೭ ||

ಇಂದುಧರ ಅಸ್ತೆಂದು ಕೊಟ್ಟು ಪೇಳಿದ ಲಂಕೆ |
ಪೊಂದುವನಕಿದನು ಧರೆಗಿಡದೆ ||
ಚಂದದಿಂ ಕೊಂಡೊಯ್ಯದೆಂದು ಪರಸುತ್ತಡಗ |
ಲಂದು ದಶಕಂಠ ಪೊರವಂಟ || ೮ || || 219 ||

**ವಾರ್ಧಕ**
ಧಾರುಣೀಶ್ವರ ಕುಶನೆ ಕೇಳು ಲಂಕೇಶನಿಗೆ |
ಮಾರವೈರಿಯು ಪ್ರಾಣಲಿಂಗವಿತ್ತಿಹನೆಂಬ |
ವಾರತೆಯ ದಿವಿಜರರಿಯುತ್ತ ನಡೆತಂದು ವಾಣೀರಮಣನೊಡನೆಂದರು ||
ಸೂರೆಯಾಪುದು ವಿಧಾತನೆ ಮುಂದೆ ತ್ರೈಲೋಕ |
ಆರು ಕೇಳುವರೆಮ್ಮ ಮೊರೆಯನೆಂದೆರಗುತಿರೆ |
ಕಾರಣವನರಿತಭಯವಿತ್ತವರೊಳಿಂತೆಂದ ವಾರಿಜೋದ್ಭವನು ನಗುತ || ೧ || || 220 ||

**ಭಾಮಿನಿ**
ಬೆದರದಿರಿ ಧೈರ್ಯದೊಳು ಯೆನ್ನೊಡ |
ನೊದಗಿ ನಡೆತಹುದೆಲ್ಲವರು ಪೋ |
ಪುದು ರಮಾಧವನೆಸೆವ ವೈಕುಂಠಕ್ಕೆನಲು ಸುರರು ||
ಮುದದಿ ಪೊರವಂಟೈದುತಾ ಶ್ರೀ |
ನಿಧಿಗೆ ವಂದಿಸಿ ನುತಿಸುತಿರೆ ತಿಳಿ |
ದದನು ಮನ್ನಿಸುತವರ ಬರವೇನೆನಲು ವಿಧಿಯೆಂದ || ೧ || || 221 ||

**ಸಾಂಗತ್ಯ - ರೂಪಕ**
ದೇವ ನೀನಾಲಿಸಿ ಕೇಳೀಗ ರಾವಣ |
ಪಾವಕಾಕ್ಷನನು ಭಕ್ತಿಯೊಳು ||
ಸೇವಿಸಿ ಪ್ರಾಣಲಿಂಗವ ಪೊಂದುತವನಿಂದ |
ಭೂವಲಯಕೆ ಕೊಂಡೊಯ್ಯುವನು || ೧ ||

ಧೂರ್ತನು ಮುಂದೆಮ್ಮ ಲಕ್ಷ್ಯಗೈಯ್ಯನು ಲೇಶ |
ವ್ಯರ್ಥವಾಯಿತು ಯೆಮ್ಮ ಬಾಳು ||
ಸ್ವಾರ್ಥಿಯಾತಗೆ ಸಕಲರು ಬೆದರುತಲೀಗ |
ಆರ್ತಿಯಿಂದಿಲ್ಲಿಗೈತಂದು || ೨ ||

ನಿನ್ನ ಪಾದವ ಕಟ್ಟಿಕೊಂಡಿಹೆವದರಿಂದೆ |
ಮನ್ನು ಕಾಪಾಡುವ ಭಾರ ||
ನಿನ್ನ ಸೇರಿಹುದೆಂದು ವಂದಿಸೆ ನಗುತಲಾ |
ಸನ್ನುತ ವಿಷ್ಣುವಿಂತೆಂದ || ೩ || || 224 ||

**ಕೇದಾರಗೌಳ - ಝಂಪೆ**
ಬೊಮ್ಮ ಲಾಲಿಸು ವರವನು | ಈ ಹಿಂದೆ |
ಮೊಮ್ಮಗಜಗಿತ್ತೆ ನೀನು ||
ಸುಮ್ಮನಿರುವನೆ ರಾವಣ | ನೀ ಪೇಳು |
ಸಮ್ಮತಿಯ ಚತುರಾನನ || ೧ ||

ಆದಡಾಲಿಸುವುದೀಗ | ಧೈರ್ಯಗೊಂ |
ಡೈದಿ ನಿಜಪುರಕೆ ಬೇಗ ||
ಮೋದದಿಂ ನಿಮ್ಮಡರನು | ಪರಿಹರಿಪೆ |
ಖೇದವಂ ತ್ಯಜಿಪುದಿನ್ನು || ೨ ||

ಎಂದು ಸಕಲರ ಕಳುಹುತ | ಸ್ಮರಿಸುತಿಂ |
ತೆಂದ ನಾರದಗೊಲಿಯುತ ||
ಇಂದುಧಾರಿಯ ಲಿಂಗವ | ದೈತ್ಯ ದಶ |
ಕಂಧರನು ಪುರಕೊಯ್ಯುವ || ೩ ||

ದಾರಿಯೊಳು ಲಿಂಗವನ್ನು | ಸ್ಥಾಪಿಪಂ |
ತೀರಸೆಯೊಳೆಸಗು ನೀನು ||
ಸಾರೆನುತ ಸುರಮುನಿಯನು | ಕಳುಹಿಸಿದ |
ನಾರಾಯಣಭಿಧಾನನು || ೪ ||

ಯೋಗಿ ನಾರದನು ಭರದಿ | ಸ್ಮರಿಸಿದನು |
ಭೋಗಿಭೂಷಜನ ಮುದದಿ ||
ಸಾಗಿ ಬಂದಾಗಣಪನು | ದೇವಋಷಿ |
ಗಾಗ ಮೈದೋರಿಸಿದನು || ೫ || || 229 ||

**ವಾರ್ಧಕ**
ನಾರದನೆ ನೀ ಯೆನ್ನ ನೆನೆದುದೇಕೆಂದೆನುತ |
ಭೋರನರುಹೆನಲೆಂದ ರಾವಣಂ ಮೆಚ್ಚಿಸುತ |
ಮಾರಾರಿಯಾತ್ಮಲಿಂಗವ ಪೊಂದಿ ಕೊಂಡೊಯ್ವನಾರು ಪೂಜಿಪರು ನಿಮ್ಮ ||
ವಾರಣಾಸ್ಯನೆ ನಿನ್ನೊಳಿದನರುಹೆ ನೆನೆದಿಹೆನು |
ದಾರಿಯೊಳಗಾತನಿಗೆ ವಿಘ್ನವಂ ತಂದೊಡ್ಡಿ |
ವಾರುಧಿಯ ತೀರದೊಳು ನೀ ಪ್ರತಿಷ್ಠಿಸುವುದಾಧಾರದಿಂದಲ್ಲೆಸೆಯಲಿ || ೧ || || 230 ||

**ಕೇದಾರಗೌಳ - ಅಷ್ಟ**
ಎನಲು ಗಣೇಶನಿಂತೆಂದ ಪೋಗುವೆನೀಗ |
ದನುಜ ದಶಾಸ್ಯನೊಳು ||
ಅನುಮಾನವಾಗದಂತಾತ್ಮಲಿಂಗವ ಪೊಂದಿ |
ವನಧಿತೀರದೊಳಿರಿಪೆ || ೧ ||

ಪೋಗು ನೀ ನಿಶ್ಚಯವಾಗೀ ಸತ್ಕಾರ್ಯವ |
ನಾ ಗೈವೆನೀಗಲೈದಿ ||
ಭೋಗಿಭೂಷಣನಿಷ್ಟದಂತಾಗಲೆನೆ ಮುನಿ |
ಸಾಗಿದ ತೋಷದಿಂದ || ೨ ||

ಗಣಪತಿ ಬ್ರಹ್ಮಚಾರಿಯ ವೇಷವನು ತಾಳಿ |
ವಿನಯದಿ ಕೈಕಸೆಯ |
ತನಯನೈತಪ್ಪ ಮಾರ್ಗದಿ ನಿಲಲಾದಶಾ |
ನನನಲ್ಲಿ ನಡೆತಂದನು || ೩ ||

ತರಣಿಯುಸ್ತಾಚಲಕೈದುತಿರಲು ದಶ |
ಶಿರ ನಿತ್ಯಾಹ್ನಿಕಕೈದಲು ||
ಹರನಾತ್ಮಲಿಂಗ ಪಿಡಿವರಾರೆಂದತ್ತಿತ್ತ |
ಪರಿಕಿಸೆ ವಟುವ ಕಂಡು || ೪ || || 234 ||

**ಕಾಂಭೋದಿ - ಝಂಪೆ**
ಧರಣಿಸುರ ಸುಕುಮಾರ ಲವಕಾಲವೀಲಿಂಗ |
ಧರಿಸಿಹುದು ನಾ ಸಂಧ್ಯಾಹ್ನಿಕವ ||
ವಿರಚಿಸುತ ಬಳಿಕ ಬಂದದಕೊಂಬೆನೈ ಬಹಳ |
ತ್ವರಿತದಿಂದೆನಲೆಂದ ಗಣಪ || ೧ || || 235 ||

**ಸುರುಟಿ – ಏಕ**
ಕಲ್ಲನು ಹಸ್ತದೊಳು | ಪಿಡಿವುದ |
ಕೊಲ್ಲೆನು ನೀ ತಾಳು ||
ಮೆಲ್ಲನೆಲ್ಲಾದರು ಬಿಸುಟು ನಿತ್ಯಾಹ್ನಿಕ |
ವೆಲ್ಲ ಮುಗಿಸಿಬಂದದ ಕೈಕೊಂಬುದು || ೧ || || 236 ||

**ಕಾಂಭೋದಿ - ಝಂಪೆ**
ಭೂತಳದೊಳಿಡಕೂಡದಿದನೆಂದು ಪೇಳಿರುವ |
ಭೂತನಾಥನು ಯೇನ ಮಾಳ್ಪೆ ||
ಮಾತು ಮೀರಿದರೆ ಬಲು ದುಗುಡಕೀಡಾಪೆನವ |
ನಾತ್ಮಲಿಂಗವಿದು ಶಿಲೆಯಲ್ಲ || ೧ ||  || 237 ||

**ಸುರುಟಿ - ಏಕ**
ನಿನ್ನಂಕಿತವೇನು | ಯೆನ್ನುವು |
ದನ್ನುಸುರೈ ನೀನು ||
ಬನ್ನಣೆಯಾಡದಿರೆಂದಾವಟುವವ |
ಗೆನ್ನಲು ಪೇಳಿದ ದಶಮುಖನವನೊಳು || ೧ ||  || 238 ||

**ಕಾಂಭೋದಿ - ಝಂಪೆ**
ದಶಕಂಠನೆಂದು ಧರೆಯೊಳಗೆನ್ನ ಪೇಳುವರು |
ಯೆಸೆವ ಲಂಕಾನಗರವಾಳ್ವ ||
ವಸುಧೀಶನಹೆನು ನಿಶ್ಚಯ ನಿನ್ನ ಪಿತನಾರು |
ಪೆಸರೇನು ನಿನ್ನದೆಂದೆನಲು || ೧ ||  || 239 ||

**ಸುರುಟಿ - ಏಕ**
ಶಿವಭಟ್ಟನ ಸುತನು | ನಾನಹೆ |
ಭುವನದೊಳೆನ್ನನು ||
ವಿವರಿಪರೆಲ್ಲರು ಗಣಪತಿಭಟ್ಟನೆಂ |
ಬುವ ನಾಮಾಂಕಿತ ನಿನಗಂಜುವೆನೈ || ೧ ||  || 240 ||

**ಕಾಂಭೋದಿ - ಝಂಪೆ**
ಏಕೆ ಬೆದರುವೆ ಬರಿದೆ ಕೇಳಿದನು ಪಿಡಿದಿರಲು |
ಬೇಕಾದ ತಿನಿಸುಗಳನೀವೆ ||
ನೀ ಕರುಣತೋರುತೆನ್ನಯ ಮನದಭೀಷ್ಟವನು |
ಜೋಕೆಯಿಂದಲಿ ನಡೆಯಿಸೆಂದ || ೧ ||  || 241 ||

**ಸುರುಟಿ - ಏಕ**
ಕಡುಬನು ಕೊಡಿಸುವೆಯ | ಲಿಂಗವ |
ಪಿಡಿಯುವೆ ಕೇಳಯ್ಯ ||
ತಡಮಾಡದೆ ಮೋದಕಗಳನೀಯುತ |
ಸಡಗರದಿಂ ಸಂತೋಷವ ಪೊಂದಿಸು || ೧ ||  || 242 ||

**ಕಾಂಭೋದಿ - ಝಂಪೆ**
ಪಿಡಿದಿರುವುದೀಗಿದನು ಬಳಿಕೆನ್ನೊಡನೆ ಬರಲು |
ಕೊಡಿಪೆನೈ ರುಚಿಯಾದ ತಿನಿಸು ||
ಜಡರಂತೆ ಧರೆಗಿಳಿಸಬೇಡವೆಂದೀಯೆ ಕೈ |
ನಡುಗಿಸುತ ಪೊಡವಿಗಿಡುತಿರಲು || ೧ ||  || 243 ||

**ಕೇದಾರಗೌಳ - ಅಷ್ಟ**
ತಡಿತಡಿಯೇಕಿಂತು ಗೈವೆಯೆಂದೆನುತಲಾ |
ಹುಡುಗನ ಮೈದಡವಿ ||
ಕಡುನಯೋಕ್ತಿಯೊಳಿಂತು ಗೈಯ್ಯದಿರೆನೆ ವಟು |
ನುಡಿದ ರಾವಣನೊಡನೆ || ೧ ||

ಸಾರಿ ನಾ ನಿನ್ನನು ಕೂಗಿ ಕರೆವೆ ಮೂರು |
ಬಾರಿ ನೀನದರೊಳಗೆ ||
ಭೋರನೈತಂದು ಕೊಳದೆ ಬಿಡಲದ ನಾನು |
ಧಾರುಣಿಗೆಸೆಯುವೆನು || ೨ ||

ಸರಿ ನೀನು ಮೂವೇಳೆ ಕರೆಯಲು ಬಂದಪೆ |
ಮರೆಯದೆನ್ನುತ್ತ ಪೋಗಿ ||
ಶರನಿಧಿ ತಡಿಗೈದೆ ಓ ರಾವಣಾಯೆಂದು |
ಕರೆದನೊಂದನೆಯ ಬಾರಿ || ೩ ||

ನೀರಿನೊಳಿಳಿದಿರಲರಿಯುತ್ತ ಮಗುಳೊಮ್ಮೆ |
ಓ ರಾವಣಾ ಯೆನಲು ||
ಧೀರ ದಶಾನನ ಪಿಂದಕೈತರುತಿರೆ |
ಮೂರನೆ ಬಾರಿಯಾಗಿ || ೪ ||

ಗಣಪತಿ ತಡೆಯದೆ ಕರೆದನಾಕ್ಷಣದೊಳು |
ಪುನಹ ರಾವಣ ಯೆನ್ನುತ ||
ದನುಜೇಶನೈತರೆ ಹರನಾತ್ಮಲಿಂಗವ |
ವನಧಿತಡಿಯೊಳಿಟ್ಟನು || ೫ || || 248 ||

**ಭಾಮಿನಿ**
ದೂರದಿಂದಿದನರಿತು ರಾವಣ |
ಮೀರಿದಾ ಖತಿಗೊಂಡು ಬ್ರಹ್ಮ |
ಚಾರಿಯಂ ತಡೆಯುತ್ತ ಮಸ್ತಕಕೆಸೆದ ಪಾತ್ರೆಯೊಳು ||
ಹಾರುವಜನಂ ವಧಿಪೆನೆಂದಿರೆ |
ನಾರದನು ಕಾಣಿಸುತ ಪೇಳಿದ |
ಘೋರವಾಗಿಹ ವಿಪ್ರಹತ್ಯಾದೋಷಬಹುದೆಂದು || ೧ || || 249 ||

**ಕಂದಪದ್ಯ**
ಋಷಿವರನೆಂದುದ ಲಾಲಿಸಿ |
ದಶಮುಖ ಮನದೊಳು ಚಿಂತಿಸುತಿರೆ ಲಂಕೆಯೊಳಂ ||
ಶಶಿಮುಖಿ ಮಂಡೋದರಿ ಕೈ |
ಕಸೆಯೊಳು ಪೇಳಿದಳತಿ ದುಗುಡವಗೊಂಡಾಗಂ || ೧ || || 250 ||

**ನೀಲಾಂಬರಿ - ಏಕ**
ಹರನ ವಲಿಸೆ ಪೋಗಿಹ | ಎನ್ನಯ ಪ್ರಾಣ |
ದೆರೆಯನೆತ್ತೈದಿದಹಾ ||
ಪುರವೈರಿಯೊಲಿದಿಹನೊ | ಇಲ್ಲವೊ ಯೆಂಬು |
ದರಿಯೆ ಮತ್ತಾದುದೇನೊ || ೧ ||

ಏನಾದ ಯೆನ್ನ ಕಾಂತ | ಸದ್ಗುಣವಂತ |
ಮಾನವಂತನು ಪ್ರಶಾಂತ ||
ಹೀನಳು ನಾನಾದೆನೆ | ಅಲ್ಲದಿರೆದ |
ಶಾನನ ಬರದಿಹನೆ || ೨ ||

ಆರೊಡನುಸುರಲಿನ್ನು | ಎನ್ನಯ ಕಷ್ಟ |
ವಾರದ ಪರಿಗಳನ್ನು ||
ಮಾರವೈರಿಯೆ ನಿನ್ನೊಳು |
ಸೌಭಾಗ್ಯವ ಕೋರುವೆ ನಿತ್ಯದೊಳು || ೩ || || 253 ||

**ವಾರ್ಧಕ**
ಎಂದು ನಾನಾತೆರದಿ ದುಗುಡವಾಂತಿರೆ ಕಾಣು |
ತೆಂದಳಾ ಕೈಕಸೆಯು ನೀ ಮರುಗದಿರು ಬರುವ |
ಇಂದುಧರನೊಲವ ಸಂಪಾದಿಸುತಲೆಮ್ಮೆಡೆಗೆ ಸಂದೇಹತಾಳದೀಗ ||
ಸ್ಕಂಧಪಿತನನು ಸ್ಮರಿಸುತಿಹುದಾವು ಸಂತಸದಿ |
ಸುಂದರಾಂಗಿಯೆ ಬೆದರಬೇಡೆಂದು ಸಂತವಿಸೆ |
ಬಂದನಲ್ಲಿಗೆ ನಾರದಂ ಶಿವನನಾಮವಂ ಚಂದದಿಂ ಕೀರ್ತಿಸುತಲಿ || ೧ || || 254 ||

**ಕಾಂಬೋಧಿ - ಏಕ**
ಬಾ ಶಂಕರ ಸ | ರ್ವೇಶ ಜಟಾಧರ |
ದೋಷನಾಶ ತ್ರಿಜ | ಗೇಶ ನಮೊ ||
ಶೇಷಬಂಧಗೊರ | ಳಾಶುತೋಷ ಹರ |
ವಾಸವನುತ ಪರಮೇಶ ನಮೊ || ೧ ||

ಕರುಣ ತೋರುತಲಿ | ಪೊರೆವೆ ತ್ರೈಜಗವ |
ಗರಳಧಾರಿ ತವ ಶರಣ ನಮೊ ||
ಪರಮಪೂಜ್ಯ ದಯ | ವಿರಿಸಿ ಸಾಧುಗಳ |
ನಿರುತ ಕಾವ ಸುರ | ತರುವೆ ನಮೊ || ೨ || || 256 ||

**ಆರ್ಯಸವಾಯಿ - ಏಕ**
ನಾರದನೀತೆರ ಪಾಡುತ ಲಂಕೆಗೆ |
ಮಾರಹರನ ನೆನೆದೈತಂದ ||
ನಾರಿ ಕೈಕಸೆಯು ನಮಿಸಿ ಕುಳ್ಳಿರಿಸೆ |
ಕಾರಣವೇನು ದುಗುಡಕೆಂದ || ೧ || || 257 ||

**ಸಾವೇರಿ - ಝಂಪೆ**
ನಾರದನೆ ಲಾಲಿಸು ಕು | ಮಾರ ರಾವಣ ಪಿಂದೆ |
ಮಾರಾರಿ ಲಿಂಗ ತರೆ ಪೋಗಿ ||
ಬಾರದಿರಲದಕಾಗಿ | ಭೂರಿ ದುಗುಡವನಾಂತು |
ಕಾರಣವ ತಿಳಿಯದಾವಿಹೆವು || ೧ ||

ಭರದೊಳೈತಂದ ತವ | ದರುಶನವು ಮಾನಸಕೆ |
ಪರಿಣಮಿಸಿತೀಗ ಸಂತೋಷ ||
ಕರುಣನಿಧಿ ಮತ್ಸುತಗೆ | ಹರನ ವಲವೀ ತನಕ |
ದೊರಕಲಿಲ್ಲವೆ ಕೇಳು ಬೇಗ || ೨ ||

ಎಂದು ಕೇಳಲು ಮುನಿಪ | ನೆಂದನಾಕ್ಷಣ ನಿನ್ನ |
ಕಂದ ಕೈಲಾಸಕೈದುತಲಿ ||
ಇಂದುಧಾರಿಯ ವಲವಿ | ನಿಂದ ಲಿಂಗವ ಪಡೆದು |
ಬಂದು ಸಂಧ್ಯಾಸಮಯದಲ್ಲಿ || ೩ ||

ಪಥದಿ ನಿಂದಿಹ ವಿಪ್ರ | ಸುತನ ಕೈಗದನಿತ್ತು |
ಹಿತದಿಂದ ನಿತ್ಯಾಹ್ನಿಕಕ್ಕೆ ||
ಮತಿವಂತನೈದಲರಿ | ಯುತ ವಟುವು ಶರಧಿತಡಿ |
ಅತುಳ ಮುದದಿಂದದನ್ನೆಸೆದ || ೪ ||

ನಿನ್ನ ಸುತನಿದನರಿಯು | ತುನ್ನತದ ಖತಿಗೊಂಡು |
ಸಣ್ಣ ವಟುವಿಂಗೆ ಮೂದಲಿಸಿ ||
ಇನ್ನೇನೆಸಗಲೆಂಬು | ದನ್ನು ಯೋಚಿಸುತಿರುವ |
ನನ್ನು ತೋರುವೆ ಬನ್ನಿರೆಂದ || ೫ ||

ನಾರಿ ಕೈಕಸೆ ಮಯಜೆ | ನಾರದನ ಜತೆಗೂಡಿ |
ಭೋರನೈತರಲು ದಶಕಂಠ ||
ಮಾರಾರಿಲಿಂಗವನು | ಭೂರಿ ಹಸ್ತಗಳಿಂದ |
ಮೀರಿದಾಶಕ್ತಿಯಿಂ ನೆಗಹೆ || ೬ ||

ಹರನ ಸ್ಮರಿಸುತ ನೆಗಹಿ | ದರೆ ಬೆಳೆಯುತಿಹುದು ಈ |
ಹರನಾತ್ಮಲಿಂಗ ಮಝಭಲರೇ ||
ಧರೆಯೊಳಗಿದೆಂತು ನೆಲ | ಸಿರುವುದು ಮಹಾ ಬಲವು |
ಹರನೆ ಗತಿಯೆಂದು ನುತಿಸಿದನು || ೭ || || 264 ||

**ಕಾಂಬೋಧಿ - ತ್ರಿವುಡೆ**

ಗೌರಿವರನೆ ಪಾಲಿಸು | ದರ್ಶನವಿತ್ತು |
ಭೂರಿ ಸಂತಸಪಡಿಸು ||
ಧೀರ ನೀ ಭವಭಯವ ಬಿಡಿಸುವ |
ಮಾರಹರ ಪರಿಪಾಲಿಸೆನ್ನನು |
ಕಾರಣಾಂಬುಧಿ ಸೋಮ ತವ ಶ್ರಿತ |
ನೀರಸೆಲಿ ದಶಕಂಠನೆನ್ನುತ || ೧ ||

ದುಷ್ಟವಿನಾಶಕನೆ | ಸದಾಶಿವ |
ಸೃಷ್ಟಿಸ್ಥಿತ್ಯೈಪೋಷಕನೆ ||
ಶ್ರೇಷ್ಠ ನಿನ್ನನು ನಂಬಿದವ ಮನ |
ದಿಷ್ಟ ಪಾಲಿಸಿ ಕಾವೆಯನುದಿನ |
ನಿಷ್ಠೆಯಿಂ ಪೂಜಿಪೆ ವಲಿದು ಬಾ |
ಅಷ್ಟದಳ ಪದ್ಮದಿ ವಿರಾಜಿತ || ೨ || || 266 ||

**ಭಾಮಿನಿ**

ಭೋಗಿಭೂಷಣ ಕೇಳು ನೀನೆನ |
ಗೀಗ ವಲಿಯದೆ ಪೋದುದಾದರೆ |
ನೀಗುವೆನು ಮಮ ಜೀವ ಲಿಂಗಕೆ ಶಿರವನಪ್ಪಳಿಸಿ ||
ವೇಗದಿಂದಿದನರಿಯೆನುತ ಶಿರ |
ಬಾಗಿ ಬಡೆಯುತ್ತಿಹುದನರಿತಾ |
ಯೋಗಿನುತ ಮಹರುದ್ರ ಸತಿಯೊಡನವಗೆ ಕಾಣಿಸಿದ || ೧ || || 267 ||

**ಸೌರಾಷ್ಟ್ರ - ತ್ರಿವುಡೆ**

ದೇವದಂಪತಿಗಳನು ಕಾಣುತ |
ರಾವಣೇಶ್ವರನೆರಗಿ ನುತಿಸಿದ |
ಭಾವಜಾರಿಯೆ ನಿನ್ನ ಮಹಿಮೆಯ | ನೇನನೆಂಬೆ || ೧ ||

ನೀನು ಕೊಟ್ಟಿಹ ಪ್ರಾಣಲಿಂಗವ |
ನಾನು ತಹ ಕಾಲದೊಳು ಪೇಳುವ |
ದೇನು ವಿಪ್ರಜನಿಂದಲೀತೆರ | ವಾದುದೆನಗೆ || ೨ ||

ಆದಡಾಲಿಸು ನಿನ್ನನೀಕ್ಷಿಸಿ |
ಮೋದವಾಂತೆನು ಕರುಣವಾರಿಧಿ |
ನೀ ದಯದೊಳೀಪ್ರಾಣಲಿಂಗವ | ನೀವುದೆನಲು || ೩ ||

ಹರನು ಸಂತಸದಿಂದ ರಾವಣ |
ಗೊರೆದನಿನ್ನಿಂದೀ ಸಮುದ್ರದ |
ಕರೆಯೊಳಿದು ಸುಕ್ಷೇತ್ರವೆನಿಸಲಿ | ಚಿಂತೆಯೇಕೆ || ೪ ||

ಗತಿಸಿದಾತನಗಿಲ್ಲಿ ಪಿಂಡವ |
ಹಿತದೊಳೀಯಲು ಕೊಡುವೆ ನಾ ಸ |
ದ್ಗತಿಯ ನಿಶ್ಚಯವೆನ್ನ ದರ್ಶನ | ಮಾಳ್ಪರಿಂಗೆ || ೫ ||

ಎಸೆವ ಕೋಟೀ ತೀರ್ಥಸ್ನಾನವ |
ನೆಸಗುತೀವನಧಿಯೊಳು ಮಿಂದೈ |
ದಸಮಬಲವಾದೀ ಮಹಾಬಲಲಿಂಗವನ್ನು || ೬ ||

ಪೂಜಿಪರಿಗಿಷ್ಟಾರ್ಥವನು ನಾ |
ನೀ ಜನುಮದೊಳಗಿತ್ತು ಪರದಲಿ |
ನೈಜವಹ ಸಾಯುಜ್ಯಮುಕ್ತಿಯ | ಮಾಜದೀವೆ || ೭ ||

ನಿನ್ನ ಕರದಿಂ ಲಿಂಗವಿದು ಗೋ |
ಕರ್ಣದಂತಾಗಿಹುದು ಪೇಳುವೆ |
ನಿನ್ನು ಗೋಕರ್ಣಾಂಕಿತದ ಸು | ಕ್ಷೇತ್ರವಾಯ್ತು || ೮ ||  || 275 ||

**ಕೇದಾರಗೌಳ - ಅಷ್ಟ**

ಎನಲು ಕೇಳುತ ದಶಕಂಧರ ಶಿವನೊಳೆಂ |
ದನು ಯೆನ್ನ ಜನನಿಯೊಳು ||
ತ್ರಿಣಯನೆ ನಿನ್ನಾತ್ಮಲಿಂಗ ತಂದೀವೆನೆಂ |
ದೆನು ಮಾತು ತಪ್ಪಲೆಂತು || ೧ ||

ದಾನವೇಂದ್ರನೆ ಬರಿಭ್ರಮೆಗೊಳ್ಳಲೇತಕೆ |
ನಾನೀವೆ ತವ ಮಾತೆಗೆ ||
ಪ್ರಾಣಲಿಂಗವ ನಿತ್ಯಪೂಜೆಗೈದಿಹ ಫಲ |
ನೀನು ಯೋಚಿಸಬೇಡವೈ || ೨ ||

ವಂದನೆ ಗೈಯುತ್ತ ನಿಂದಿರೆ ಕೈಕಸೆ |
ಇಂದುಶೇಖರ ನಗುತ ||
ಅಂದವಾಯಿತು ನಿನ್ನ ಸುತನಿಂ ಭೂಕೈಲಾಸ |
ವೆಂದೆಂಬೀ ಸುಕ್ಷೇತ್ರವು || ೩ ||

ಸುದತಿ ಮಂಡೋದರಿ ಬಂದೆರಗಲು ಕಂಡು |
ಮದನಾರಿ ಸಂತಸದಿ ||
ವಿಧುಮುಖಿ ನಿನ್ನಯ ಬಸುರಿನಿಂ ಶಕ್ರಾರಿ |
ಯುದಿಸುವನೆಂದೊರೆದ || ೪ ||

ನಾರದಮುನಿ ಬಂದು ನುತಿಪುದನೀಕ್ಷಿಸಿ |
ಮಾರವೈರಿಯು ಮನ್ನಿಸಿ ||
ಭೂರಿಶ್ರಮೆಯ ತಾಳಿಯೆನ್ನಾತ್ಮಲಿಂಗವ |
ಧಾರಿಣಿಯೊಳು ಮುದದಿ || ೫ ||

ಸ್ಥಾಪನೆಗೈಸಿದೆಯೆನ್ನ ಕುಮಾರನಿಂ |
ಯೇಪರಿಯೊರೆವೆನಿನ್ನು ||
ನೀ ಪರಕಾರ್ಯ ಸ್ವಕಾರ್ಯವೆಂದೆಸಗಿದೆ |
ತಾಪಸಾಂಬುಜದಿನಪ || ೬ || || 281 ||

**ಕಂದಪದ್ಯ**
ಇಂತೀಪರಿಯಿಂ ಸಕಲರ |
ಕಂತುಹರನು ಮನ್ನಿಸಿಯಡಗಲು ಕಂಡೆಲ್ಲರು ||
ಸಂತಸದಿಂ ಪೊರವಂಟಾ |
ಗಂ ತಂತಮ್ಮಯ ನಗರವ ವಿಭವದಿ ಸಾರ್ದರ್ || ೧ || || 282 ||

**ಕಾಂಭೋದಿ - ಝಂಪೆ**
ಜಯತು ಜಯ ಮಂಗಳಂ | ಜಗದಾದಿ ಮೂರುತಿಗೆ |
ಜಯ ಮಂಗಳಂ ಮತ್ಸ್ಯರೂಪಾದಗೆ ||
ಜಯತು ಜಯ ಕೂರ್ಮನಿಗೆ ವರಹಾವತಾರನಿಗೆ |
ಜಯ ಜಯತು ಮಂಗಳಂ ನರಸಿಂಹಗೆ || ೧ ||

ಮಂಗಳಂ ವಾಮನಗೆ ಭಾರ್ಗವಗೆ ರಾಘವಗೆ |
ಮಂಗಳಂ ಶ್ರೀಕೃಷ್ಣನಿಗೆ ಬೌದ್ಧಗೆ ||
ಮಂಗಳಂ ಕಲ್ಕ್ಯಾವತಾರನಿಗೆ ಜಗದೊಡೆಯ |
ರಂಗ ವಿಠ್ಠಲ ವೆಂಕಟೇಶ್ವರನಿಗೆ || ೨ || || 284 ||

***** ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ತಿಳಿದಿಲ್ಲ

**ಪ್ರಸಂಗ ಪ್ರತಿ ಆಧಾರ:** ಪ್ರಕಟಿತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಡಾ. ರಾಧಕೃಷ್ಣ ಉರಾಳ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ರವಿ ಮಡೋಡಿ

**ಅಂತರಜಾಲ ಪ್ರತಿ ಬರವಣಿಗೆ:** ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ವಿನ್ಯಾಸ:** ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ